# ಶೈಕ್ಷಣಿಕ ಅಧ್ಯಯನ ಮತ್ತು ಸಂಶೋಧನೆ ಕೇಂದ್ರವಾಗಿ ಡಯಟ್

(ರಚನೆ: ವಿಶ್ವನಾಥ ಕೆ ವಿ, ಉಪನ್ಯಾಸಕ, ಡಯಟ್, ಕೂಡಿಗೆ, ಕೊಡಗು ಜಿಲ್ಲೆ)

**ಉದ್ದೇಶಗಳು**

1. ಡಯಟ್‌ನ್ನು ಜಿಲ್ಲೆಯ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳ ಕೇಂದ್ರವಾಗಿ ಅರ್ಥಮಾಡಿಕೊಳ್ಳುವುದು.
2. ಡಯಟ್ ಸಂದರ್ಭದಲ್ಲಿ ಅಧ್ಯಯನಗಳ ಆವಶ್ಯಕತೆಯ ಬಗ್ಗೆ ಅರಿವನ್ನು ಬೆಳೆಸಿಕೊಳ್ಳುವುದು.
3. ಡಯಟ್ ಕೈಗೊಳ್ಳಬಹುದಾದ ವಿವಿಧ ರೀತಿಯ ಅಧ್ಯಯನ/ಸಂಶೋಧನಾ ಕಾರ್ಯಗಳ ಬಗ್ಗೆ ಅರಿವನ್ನು ಬೆಳೆಸಿಕೊಳ್ಳುವುದು.
4. ವಿವಿಧ ಅಧ್ಯಯನ ವಿಧಾನಗಳ ಬಗ್ಗೆ ತಿಳಿಯುವುದು.
5. ವಿವಿಧ ರೀತಿಯ ಮಾಹಿತಿಗಳನ್ನು ದಾಖಲಿಸಿಕೊಳ್ಳುವ ಹಾಗೂ ಕ್ರೋಡೀಕರಿಸುವ ಆವಶ್ಯಕತೆಯನ್ನು ಮನಗಾಣುವುದು.
6. ಮಾಹಿತಿ ದಾಖಲೀಕರಣ ಹಾಗೂ ಕ್ರೋಡೀಕರಣಕ್ಕೆ ಬೇಕಾದ ನಮೂನೆಗಳನ್ನು ತಯಾರಿಸಲು ಅಭ್ಯಾಸ ಮಾಡುವುದು.
7. ಡಯಟ್‌ನಲ್ಲಿ ಮಾಹಿತಿ ಹಂಚಿಕೊಳ್ಳುವ ವೇದಿಕೆಗಳನ್ನು ಹುಟ್ಟುಹಾಕುವುದು ಹಾಗೂ ಅವನ್ನು ನಿರ್ವಹಿಸುವುದು.

**ಪೀಠಿಕೆ**

ಜಿ.ಶಿ.ತ.ಸಂ ಜಿಲ್ಲಾಹಂತದ ಶೈಕ್ಷಣಿಕ ನಾಯಕತ್ವವನ್ನು ವಹಿಸಿಕೊಳ್ಳಬೇಕಾದ ಸಂಸ್ಥೆ. ಶೈಕ್ಷಣಿಕ ಆಡಳಿತದ ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಡಯಟ್‌ನ ಶೈಕ್ಷಣಿಕ ನಾಯಕತ್ವದ ಜವಾಬ್ದಾರಿಗಳು ಬಹಳ ಗುರುತರವಾಗುತ್ತವೆ. ಜಿಲ್ಲೆಯ ಶೈಕ್ಷಣಿಕ ಮಾಹಿತಿಯ ನಿರ್ವಹಣೆ, ವಿಶ್ಲೇಷಣೆ ಹಾಗೂ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವುದು ಡಯಟ್‌ನ ಕಾರ್ಯವ್ಯಾಪ್ತಿಯೊಳಗೇ ಬರುತ್ತವೆ. ಪ್ರತಿಯೊಂದೂ ನಿರ್ಧಾರಕ್ಕಾಗಿ ಅವು ರಾಜ್ಯ ಕಛೇರಿಯನ್ನು ಸಂಪರ್ಕಿಸಬೇಕಾದ ಆವಶ್ಯಕತೆ ಇಲ್ಲ. ತನ್ನ ಗುರಿಗಳನ್ನು ತಾನೇ ನಿರ್ದೇಶಿಸಿಕೊಳ್ಳಲು, ಪುನರ್ವಿಮರ್ಶಿಸಿಕೊಳ್ಳಲು ಹಾಗೂ ಬದಲಾಗುತ್ತಿರುವ ಸಾಮಾಜಿಕ ಸ್ಥಿತಿಗಳಿಗೆ ಬೇಕಾದ ಹೊಂದಾಣಿಕೆ ಮಾಡಿಕೊಳ್ಳಲು ಡಯಟ್ ಸ್ವಾಯತ್ತತೆ ಬೆಳೆಸಿಕೊಳ್ಳಬೇಕಾಗಿದೆ. ಇಂತಹ ಸಂದರ್ಭದಲ್ಲಿ ಡಯಟ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣಾಧಿಕಾರಿಗಳ ಶೈಕ್ಷಣಿಕ ಅಭಿವೃದ್ಧಿಯೂ ಮಹತ್ತರ ವಿಷಯವಾಗಿದೆ. ಕೆಲವೊಮ್ಮೆ ಇದು ಬೇರೆ ಸಂಸ್ಥೆಗಳಿಂದ ಮಾಡಲ್ಪಡುತ್ತದೆ. ಉದಾಹರಣೆಗೆ ಡಿ ಎಸ್ ಇ ಆರ್ ಟಿ, ನ್ಯೂಪಾ, ಎನ್ ಸಿ ಇ ಆರ್ ಟಿ, ಆರ್ ಐ ಇ ಹೀಗೆ ಹಲವಾರು ಸಂಸ್ಥೆಗಳು ಸಂಪನ್ಮೂಲ ಮತ್ತು ತರಬೇತಿಯನ್ನು ಒದಗಿಸುತ್ತವೆ. ಆದರೆ ಕೇವಲ ಈ ಕಾರ್ಯಕ್ರಮಗಳನ್ನು ಮಾತ್ರ ಆಧರಿಸಿದರೆ ಸಂಸ್ಥೆಯ ಎಲ್ಲಾ ಸಿಬ್ಬಂದಿ ಹಾಗೂ ಅಧಿಕಾರಿಗಳು ಶೈಕ್ಷಣಿಕ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲ. ಹೊರಗಿನಿಂದ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಬೆಂಬಲ ಇದ್ದಾಗ್ಯೂ ಡಯಟ್ ತನ್ನ ಬೆಳವಣಿಗೆಯನ್ನು ತಾನೇ ಸಾಧಿಸಬೇಕಾಗುತ್ತದೆ. ತನ್ನ ಜಿಲ್ಲೆಯನ್ನು ತಾನು ಅರ್ಥಮಾಡಿಕೊಂಡು ಅಭಿವೃದ್ಧಿಗೆ ಎದುರಾಗುವ ತೊಡಕುಗಳನ್ನು ನಿವಾರಿಸಿ ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸಬೇಕಾಗುತ್ತದೆ.

ಒಂದು ಸಂಸ್ಥೆ ಇಂತಹ ಮಟ್ಟಕ್ಕೆ ಬೆಳೆಯಬೇಕಾದರೆ, ಅಲ್ಲಿನ ಮಾನವ ಸಂಪನ್ಮೂಲದ ಗುಣಮಟ್ಟ ಬಹಳ ಮುಖ್ಯವಾಗುತ್ತದೆ ಹಾಗೂ ಅದರ ಅಭಿವೃದ್ಧಿ ಅನಿವಾರ್ಯವಾಗುತ್ತದೆ. ಇರುವ ಎಲ್ಲಾ ಸಂಪನ್ಮೂಲಗಳ ಗರಿಷ್ಠತಮ ಹಾಗೂ ಯುಕ್ತಬಳಕೆಯನ್ನು ಸಾಧಿವುದೂ ಮುಖ್ಯವಾಗುತ್ತದೆ. ಈ ದೃಷ್ಟಿಯಿಂದ ಮಾನವ ಸಂಪನ್ಮೂಲಗಳ ನಿರ್ವಹಣೆಯೂ ಉನ್ನತ ಮಟ್ಟದ್ದಾಗಿರಬೇಕಾಗುತ್ತದೆ. ಸಂಪನ್ಮೂಲಗಳ ಕ್ರೋಡೀಕರಣ, ರಾಷ್ಟ್ರ,ರಾಜ್ಯ ಶೈಕ್ಷಣಿಕ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನ ಹಾಗೂ ಅನುಪಾಲನೆ, ಜಿಲ್ಲೆಯ ಆವಶ್ಯಕತೆಗನುಗುಣವಾದ ಶಿಕ್ಷಣ ಕ್ರಮವನ್ನು ರೂಪಿಸುವುದೇ ಮೊದಲಾದ ಸವಾಲುಗಳು ಡಯಟ್ ಮುಂದೆ ಬರುತ್ತವೆ. ಇಂತಹ ನಿರೀಕ್ಷೆ ಹಾಗೂ ಸವಾಲುಗಳನ್ನು ಎದುರಿಸುವಲ್ಲಿ ಸಂಸ್ಥೆಯ ಕಾರ್ಯನೀತಿ ಮತ್ತು ಆಚರಣೆಗಳು ಅವುಗಳದೇ ಆದ ಪ್ರಭಾವ ಬೀರುತ್ತವೆ.

ಡಯಟ್ ತನ್ನ ಪಾತ್ರ ಮತ್ತು ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ, ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ ಸರಿಯಾದ ಮಾಹಿತಿ ಮತ್ತು ಅಂಕಿಅಂಶಗಳು ಬೇಕು. ನಿರ್ಧಾರಗಳನ್ನು ಮಾಡುವವರಿಗೆ ಜಿಲ್ಲೆಯ ವೈಶಿಷ್ಟ್ಯತೆ ಹಾಗೂ ನಿರೀಕ್ಷೆಗಳ ಅರಿವಿರಬೇಕಾಗುತ್ತದೆ. ಜಿಲ್ಲೆಯ ಶೈಕ್ಷಣಿಕ ವಾತಾವರಣದಲ್ಲಿ ಆಗಬೇಕಾದ ಬದಲಾವಣೆಗಳು, ಅದಕ್ಕಾಗಿ ಮಾಡಬೇಕಾದ ಪ್ರಯತ್ನಗಳು ವೈಜ್ಞಾನಿಕವಾಗಿರಬೇಕು. ಈ ದೃಷ್ಟಿಯಿಂದ ಸಂಶೋಧನೆ, ಸಮೀಕ್ಷೆ, ಅಧ್ಯಯನಗಳು ಮಹತ್ವದ ಪಾತ್ರವಹಿಸುತ್ತವೆ. ಡಯಟ್ ಜಿಲ್ಲೆಯ ಶೈಕ್ಷಣಿಕ ಚಟುವಟಿಕೆಗಳ ಕೇಂದ್ರಬಿಂದುವೇ ಆಗಿದೆ. ಈ ಕೇಂದ್ರವು ಜಿಲ್ಲೆಯ ಶೈಕ್ಷಣಿಕ ನಿರೀಕ್ಷೆಗಳನ್ನು ಅರಿತುಕೊಂಡು, ಭವಿಷ್ಯದ ಆವಶ್ಯಕತೆಗಳೊಡನೆ ಅವುಗಳನ್ನು ಸಮನ್ವಯಗೊಳಿಸಿಕೊಂಡು ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿರೂಪಿಸಬೇಕು. ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ನಿವಾರಿಸಿಕೊಂಡು ಮುಂದುವರಿಯಬೇಕು. ಅಂತೆಯೇ ಕಾರ್ಯಕ್ರಮಗಳ ಪರಿಣಾಮಕಾರಿತ್ವದ ಕುರಿತಾಗಿಯೂ ಅಧ್ಯಯನಗಳನ್ನು ಕೈಗೊಳ್ಳಬೇಕು. ಈ ನಿಟ್ಟಿನಿಂದ ಡಯಟ್ ಶೈಕ್ಷಣಿಕ ಸಂಶೋಧನೆ ಹಾಗೂ ಅಧ್ಯಯನಗಳ ಕೇಂದ್ರವೇ ಆಗಿದೆ ಎನ್ನಬಹುದು. ಆದರೆ ಸದ್ಯಕ್ಕೆ ಡಯಟ್‌ಗಳು ವಿವಿಧ ಕಾರಣಗಳಿಗಾಗಿ ತಮ್ಮ ಈ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎನ್ನುವುದೂ ಸತ್ಯ. ಈ ಮೊಡ್ಯೂಲಿನಲ್ಲಿ ಡಯಟ್‌ನ್ನು ಜಿಲ್ಲೆಯ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳ ಕೇಂದ್ರವಾಗಿ ರೂಪಿಸುವುದು ಹೇಗೆ ಎಂಬುದರ ಬಗ್ಗೆ ಚರ್ಚಿಸೋಣ.

***ಚಟುವಟಿಕೆ 1***

ಡಯಟ್‌ನಿಂದ ಜಿಲ್ಲೆಯು ಏನನ್ನು ನಿರೀಕ್ಷಿಸುತ್ತದೆ ಎಂಬುದನ್ನು ಪಟ್ಟಿಮಾಡಿ.

ಡಯಟ್ ಎದುರಿಸುವ ಸವಾಲುಗಳ ಪಟ್ಟಿ ಮಾಡಿ.

ಈ ಸವಾಲುಗಳನ್ನು ಎದುರಿಸಲು ಅಧ್ಯಯನ ಅಥವಾ ಸಂಶೋಧನೆಗಳು ಯಾವ ರೀತಿ ಸಹಾಯ ಮಾಡಬಲ್ಲವು ಎಂಬುದನ್ನು ನಿಮ್ಮ ಸಹೋದ್ಯೋಗಿಗಳೊಡನೆ ಚರ್ಚಿಸಿ.

## ಡಯಟ್ ಸಂದರ್ಭದಲ್ಲಿ ಸಂಶೋಧನೆಯ ಆವಶ್ಯಕತೆ

### 1. ಕ್ಷೇತ್ರ ಮಟ್ಟದ ವಾಸ್ತವವನ್ನು ಅರ್ಥಮಾಡಿಕೊಳ್ಳುವುದು

ಡಯಟ್ ಕೈಗೊಳ್ಳುವ ಪ್ರತಿ ನಿರ್ಧಾರವೂ ಅದು ಇರುವ ಜಿಲ್ಲೆಯ ಶೈಕ್ಷಣಿಕ ಆವಶ್ಯಕತೆಗಳಿಗೆ ಸ್ಪಂದಿಸುವಂತಿರಬೇಕು. ಕೆಲವೊಮ್ಮೆ ರಾಷ್ಟ್ರ ಮಟ್ಟದಲ್ಲಾದ ನಿರ್ಧಾರಗಳನ್ನೂ ಪುನರ್ವಿಮರ್ಶಿಸಿ ಅನುಷ್ಠಾನ ಮಾಡಿಕೊಳ್ಳಬೇಕಾಗಬಹುದು. ಎಂದರೆ ಡಯಟ್‌ಗೆ ತಳಮಟ್ಟದ ವಾಸ್ತವತೆಯ ಅರಿವಿರಬೇಕು, ಆ ವಾಸ್ತವದಲ್ಲಿ ಆಗಬೇಕಾದ ಕಾರ್ಯಗಳ ಬಗೆಗೆ ಒಂದು ಸ್ಥೂಲ ಕಲ್ಪನೆಯಾದರೂ ಇರಬೇಕು. ಅಂತಹ ವಾಸ್ತವಕ್ಕೆ ಹೊಂದಿಕೊಂಡು ಅಲ್ಲಿಯೇ ಅಭಿವೃದ್ಧಿಯ ಬೀಜಗಳನ್ನು ಬಿತ್ತಬಲ್ಲ ಶೈಕ್ಷಣಿಕ ಸಾಮರ್ಥ್ಯವಿರಬೇಕು. ಡಯಟ್ ತೆಗೆದುಕೊಳ್ಳುವ ನಿರ್ಧಾರಗಳು ಪ್ರಚಲಿತ ಶೈಕ್ಷಣಿಕ ಚಿಂತನೆ, ಸುಸ್ಥಿರ ತಾತ್ವಿಕ ನಿಲುವುಗಳ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳಬೇಕು. ಅಂತಹ ನಿರ್ಧಾರಗಳನ್ನು ತನ್ನದೇ ಹಂತದಲ್ಲಿ ಪ್ರಾಯೋಗಿಕವಾಗಿ ಪರೀಕ್ಷಿಸಿ ಅಳವಡಿಸಿಕೊಳ್ಳುವ ಸಾಮರ್ಥ್ಯವೂ ಡಯಟ್‌ಗೆ ಇರಬೇಕು. ಇದಕ್ಕಾಗಿ ಕ್ಷೇತ್ರಮಟ್ಟದಲ್ಲಿ ಅಧ್ಯಯನಗಳನ್ನು, ಸಂಶೋಧನೆಗಳನ್ನು ಕೈಗೊಳ್ಳುವುದು ಅನಿವಾರ್ಯವಾಗುತ್ತದೆ. ವ್ಯವಸ್ಥಿತವಾದ ಮಾಹಿತಿಯ ಆಧಾರವಿಲ್ಲದೆಯೇ ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗದು.

### 2. ಸ್ವತಂತ್ರ ನಿರ್ಧಾರಗಳನ್ನು ಕೈಗೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳುವುದು

ಈ ಮೇಲೆ ಚರ್ಚಿಸಿದ ಎಲ್ಲ ಅಂಶಗಳಿಗೂ ಸಂಶೋಧನೆ ಮೂಲ. ತಾನೇ ಸ್ವತ: ಅಧ್ಯಯನಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮಾತ್ರ ಡಯಟ್ ತಾನೇ ನಿರ್ಧಾರಗಳನ್ನು ತೆಗೆದುಕೊಳ್ಳುವಷ್ಟರಮಟ್ಟಿನ ಸ್ವಾಯತ್ತತೆ ಬೆಳೆಸಿಕೊಳ್ಳಬಹುದು. ವಿಕೇಂದ್ರೀಕರಣದ ಮೂಲ ಮಂತ್ರವೇ ಎಲ್ಲಾ ಹಂತಗಳ ಸಂಸ್ಥೆಗಳನ್ನೂ ಸಬಲೀಕರಿಸುವುದು. ಡಯಟ್ ಸಬಲೀಕರಣಗೊಳ್ಳಬೇಕಾದರೆ ಅದರ ಸ್ವಾಯತ್ತತೆ ಅದರಲ್ಲೇ ಉಳಿಯಬೇಕು. ಅಧ್ಯಯನಗಳ ಮೂಲಕ ದೊರಕುವ ಒಳನೋಟಗಳು ಡಯಟ್‌ಗೆ ತನ್ನ ಆವಶ್ಯಕತೆಗಳಿಗನುಗುಣವಾದ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವ ಶಕ್ತಿಯನ್ನು ನೀಡುತ್ತದೆ. ಕಾರ್ಯಕ್ರಮಗಳನು ರೂಪಿಸಿ ಅನುಷ್ಠಾನಗೊಳಿಸಿದಬಳಿಕ ಅವುಗಳ ಪರಿಣಾಮಕಾರಿತ್ವವನ್ನು ಅವಲಂಬಿಸಿಕೊಂಡು ಮುಂದಿನ ಹಂತಗಳ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಅಧ್ಯಯನಗಳನ್ನು ಕೈಗೊಳ್ಳುವುದು ಮುಖ್ಯವಾಗುತ್ತದೆ.

**3. ಜಿಲ್ಲೆಯಲ್ಲಿ ಶಿಕ್ಷಣಕ್ಕಾಗಿರುವ ಮೂಲಭೂತ ಸೌಕರ್ಯಗಳ ಸಮೀಕ್ಷೆ**

ಯಾವುದೇ ವ್ಯವಸ್ಥೆಯಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳು ಆ ವ್ಯವಸ್ಥೆಯ ಕಾರ್ಯದ ಗುಣಮಟ್ಟವನ್ನು ಪ್ರಭಾವಿಸುತ್ತವೆ. ಆದರೇ ತಾವೇ ತಾವಾಗಿ ಯಾವುದೇ ಸೌಕರ್ಯಗಳು ಅಭಿವೃದ್ಧಿ ಹೊಂದುವುದಿಲ್ಲ. ಅದಕ್ಕಾಗಿ ದೂರದೃಷ್ಟಿಯ ಒಂದು ಯೋಜನೆ, ಲಭ್ಯ ಸಂಪನ್ಮೂಲ ವಿವರ ಇತ್ಯಾದಿಗಳ ನಿರ್ವಹಣೆ ಅಗತ್ಯವಾಗಿರುತ್ತದೆ. ಒಂದು ಜಿಲ್ಲೆಯ ಶೈಕ್ಷಣಿಕ ಪ್ರಗತಿಗೆ ಆವಶ್ಯಕವಾಗಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಡಯಟ್ ಸಮೀಕ್ಷೆಗಳನ್ನು ಕೈಗೊಳ್ಳಬಹುದು. ಅಗತ್ಯ ಸೌಲಭ್ಯಗಳ ಪಟ್ಟಿಯೊಂದನ್ನು ಬೇಡಿಕೆಗೆ ಅನುಗುಣವಾಗಿ ತಯಾರಿಸಿ ಅದನ್ನು ಹೊಂದಲು ಒಂದು ಕಾರ್ಯಯೋಜನೆ ರೂಪಿಸಬಹುದು. ಈ ಸಮೀಕ್ಷೆ ಮತ್ತು ಕಾರ್ಯಯೋಜನೆಯನ್ನು ಕಾಲ ಕಾಲಕ್ಕೆ ಮೌಲ್ಯಮಾಪನಕ್ಕೆ ಒಳಪಡಿಸಿ ಪ್ರಗತಿಯ ಗತಿಯನ್ನು ನಿರ್ಧರಿಸಬಹುದು. ಇದರಿಂದ ಜಿಲ್ಲೆಯಲ್ಲಿ ಶಿಕ್ಷಣಕ್ಕಾಗಿರುವ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬಹುದು. ಈ ರೀತಿಯ ವ್ಯವಸ್ಥಿತವಾದ ಪ್ರಯತ್ನಗಳಿಂದ ಶೀಘ್ರಗತಿಯಲ್ಲಿ ಅಭಿವೃದ್ಧಿ ಸಾಧಿಸಲು ಸಾಧ್ಯವಾಗುತ್ತದೆ.

**4.ಸಂಸ್ಥೆಯ ಸರ್ವ ಸಿಬ್ಬಂದಿ ಹಾಗೂ ಜಿಲ್ಲೆಯ ಇತರ ಅಧಿಕಾರೀ ವರ್ಗದವರ/ಶಿಕ್ಷಕರ/ತರಬೇತುದಾರರ ವ್ಯಕ್ತಿ ವೈಶಿಷ್ಟ್ಯಗಳ ದಾಖಲೀಕರಣ ಹಾಗೂ ನಿರ್ವಹಣೆ.**

ಸಂಸ್ಥೆಯಲ್ಲಿ/ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಂಪನ್ಮೂಲ ವ್ಯಕ್ತಿಗಳ/ಶಿಕ್ಷಕರ ವೈಶಿಷ್ಟ್ಯಗಳ ನಿರ್ವಹಣೆ ಡಯಟ್‌ನ ಕಾರ್ಯಚಟುವಟಿಕೆಗಳ ಒಂದು ಭಾಗವೇ ಆಗಿದೆ. ಈ ರೀತಿಯ ದಾಖಲೆಗಳಲ್ಲಿ ವ್ಯಕ್ತಿಗಳ ವಿದ್ಯಾರ್ಹತೆ, ಆಸಕ್ತಿ, ಪಡೆದ ತರಬೇತಿ, ಸಂಪನ್ಮೂಲ ವ್ಯಕ್ತಿಯಾಗಿ ಪಡೆದ ಅನುಭವ, ತಂತ್ರಜ್ಞಾನದ ಪರಿಚಯ ಮತ್ತು ಬಳಕೆಯ ಸಾಮರ್ಥ್ಯ, ಮುಂತಾದ ವಿವರಗಳನ್ನು ಸಂಗ್ರಹಿಸಿ ನಿರ್ವಹಿಸ ಬಹುದು. ಈ ವಿವರಗಳ ಅಧಾರದಲ್ಲಿ, ಪ್ರತೀ ವ್ಯಕ್ತಿಗೆ ಸಂಬಂಧಿಸಿದ ನಿರ್ಧಾರಗಳನ್ನು ಮಾಡಬಹುದು. ಆಯ್ದ ತರಬೇತಿಗಳಿಗೆ ಸಂಪನ್ಮೂಲ ವ್ಯಕ್ತಿಗಳನ್ನು ಆರಿಸಬಹುದು. ಬೇರೆ ಬೇರೆ ತರಬೇತಿಗಳಿಗೆ ಅಗತ್ಯ ಉಳ್ಳ ವ್ಯಕ್ತಿಗಳನ್ನು ನಿಯೋಜಿಸ ಬಹುದು. ತಮ್ಮ ಸಂಸ್ಥೆಯ ಕಾರ್ಯಗಳಲ್ಲಿ ಪ್ರತೀ ವ್ಯಕ್ತಿಯ ಲಭ್ಯ ಪರಿಣತಿಯನ್ನು/ ಸಾಮರ್ಥ್ಯವನ್ನು ಬಳಸಬಹುದು. ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಿಸಿದಂತೆ ಇಂತಹ ವ್ಯಕ್ತಿವೈಶಿಷ್ಟ್ಯಗಳ ದಾಖಲೆಗಳು ತಕ್ಷಣದ ಮಾಹಿತಿಯನ್ನು ವಿವರವಾಗಿ ಒದಗಿಸಿಕೊಡುತ್ತವೆ. ಜಿಲ್ಲೆಯ ಸಮಗ್ರ ಚಿತ್ರಣವನ್ನು ನೀಡಬಲ್ಲ ಈ ರೀತಿಯ ವ್ಯಕ್ತಿದಾಖಲೆಗಳು ವಾಸ್ತವವಾದ ಆವಶ್ಯಕತೆಗಳಿಗೆ ಸ್ಪಂದಿಸುವ ನಿರ್ಧಾರಗಳನ್ನು ಕೈಗೊಳ್ಳಲು ಸಹಾಯವಾಗುತ್ತವೆ. ಈ ರೀತಿಯ ವೈಜ್ಞಾನಿಕ ವಿಧಾನವನ್ನು ಅನುಸರಿಸಿದ ಕೈಗೊಂಡ ನಿರ್ಧಾರಗಳು ಬಹುಪಾಲು ಹಾಗೇ ತೆಗೆದುಕೊಳ್ಳುವ ನಿರ್ಧಾರಗಳಿಗಿಂತ ಹೆಚ್ಚು ಸುಸ್ಥಿರ ಫಲಿತಾಂಶವನ್ನು ನೀಡುತ್ತವೆ.

**5. ಶಿಕ್ಷಕರು ಮತ್ತು ಸಮುದಾಯದೊಂದಿಗೆ ಸಂಪರ್ಕ ವೇದಿಕೆ**

ಡಯಟ್‌ಗಳು ಜಿಲ್ಲಾ ಹಂತದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳಾಗಿದ್ದು ಜಿಲ್ಲೆಯ ನಿರೀಕ್ಷೆಗಳಿಗೆ ಸ್ಪಂದಿಸಬೇಕಾದದ್ದು ಅನಿವಾರ್ಯ. ಸಮುದಾಯದ ನಿರೀಕ್ಷೆಗಳು, ಪ್ರಸ್ತುತ ಶಿಕ್ಷಕರ ಬಗ್ಗೆ, ಶಾಲೆಯ ಶೈಕ್ಷಣಿಕ ಸಾಮರ್ಥ್ಯ, ಇದೀಗ ಬದಲಾಗುತ್ತಿರುವ ಪ್ರಾಥಮಿಕ ಶಿಕ್ಷಣವ್ಯವಸ್ಥೆ , ಗ್ರೇಡಿಂಗ್ ಪದ್ಧತಿ, ತ್ರೈಮಾಸಿಕ ಪದ್ಧತಿ, ಪರೀಕ್ಷಾ ಪದ್ಧತಿ ಮುಂತಾದ ವಿಚಾರಗಳ ಬಗ್ಗೆ ಸಮುದಾಯದಲ್ಲಿ ಅರಿವು ಮೂಡಿಸಬೇಕಾಗುತ್ತದೆ. ಈ ಎಲ್ಲವನ್ನೂ ತಳಹಂತದಲ್ಲಿ ಸಮುದಾಯಕ್ಕೆ ಒಯ್ಯುವವರು ಶಿಕ್ಷಕರು. ಅಂತೆಯೇ ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಬಹಳ ಮುಖ್ಯ ವಿಷಯವಾಗುತ್ತದೆ. ಈ ನಿಟ್ಟಿನಲ್ಲಿ ಡಯಟ್ ನಿರ್ವಹಿಸುವ ತರಬೇತಿಗಳ ಗುಣಮಟ್ಟ, ತರಗತಿಗಳಲ್ಲಿ ಅದರ ಉಪಯುಕ್ತತೆ, ತರಬೇತಿ ವಿಧಾನಗಳ ಬಗ್ಗೆ ಶಿಕ್ಷಕರ ಅನಿಸಿಕೆ, ತರಬೇತಿಯ ಅನುಪಾಲನೆ ಮುಂತಾದ ವಿಚಾರಗಳ ಬಗ್ಗೆ ಸಂಸ್ಥೆಗೆ ಹಿಮ್ಮಾಹಿತಿಯ ಅಗತ್ಯವಿದೆ. ಸಮುದಾಯ ಹಾಗೂ ಶಿಕ್ಷಣ ವ್ಯವಸ್ಥೆಯ ವಿವಿಧ ಅಂಗ ಸಂಸ್ಥೆಗಳ ಪರಸ್ಪರ ಸಂಬಂಧಗಳ ಬಗ್ಗೆಯೂ ಡಯಟ್‌ಗೆ ಮಾಹಿತಿ ಬೇಕಾಗುತ್ತದೆ. ಸಮುದಾಯದ ಜೊತೆಗೆ ವ್ಯವಹರಿಸಲು ಶಿಕ್ಷಕರ ಸಬಲೀಕರಣ ಆಗಬೇಕಾಗಿದೆ. ಇದಕ್ಕೆ ಪೂರಕವಾದ ಸಂಶೋಧನೆ, ಅಧ್ಯಯನಗಳನ್ನು ಕೈಗೊಳ್ಳುವುದರಿಂದ ಸಮುದಾಯವನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಡಯಟ್ ಅರ್ಥಪೂರ್ಣವಾದ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.

## ಅಧ್ಯಯನ: ಅರ್ಥ ಮತ್ತು ಪರಿಕಲ್ಪನೆ

ಅಧ್ಯಯನ ಎಂಬ ಪದದ ಬಳಕೆ 'ತಿಳಿಯುವುದು', 'ಓದುವುದು; ಎಂಬಿತ್ಯಾದಿ ಬಳಕೆಗಳಿಂದ ಹೇಗೆ ಭಿನ್ನವಾಗಿದೆ ಎಂದು ಯೋಚಿಸೋಣ. ಅಧ್ಯಯನವು 'ತಿಳಿಯುವ' ಪ್ರಕ್ರಿಯೆಗೆ ಒಂದು ಗಂಭೀರ ಉದ್ದೇಶ ನೀಡುತ್ತದೆ. ಅಧ್ಯಯನವು ತಿಳಿಯಬೇಕಾದ್ದನ್ನು ಸಮಗ್ರವಾಗಿ ತಿಳಿಯುವುದು ಎಂದೂ ಅರ್ಥ ನೀಡುತ್ತದೆ. ಡಯಟ್ ಅಧ್ಯಯನ ಮಾಡಬೇಕಾದದ್ದು ತನ್ನ ಜಿಲ್ಲೆಯ ಶೈಕ್ಷಣಿಕ ಸ್ಥಿತಿಗತಿ, ಅಂಕಿಅಂಶ, ವಿವಿಧ ಕಾರ್ಯಕ್ರಮಗಳ ಪರಿಣಾಮಕಾರಿತ್ವ, ಶೈಕ್ಷಣಿಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಕೆಲಸ. ಯಾವುದೇ ಅಭಿವೃದ್ಧಿ ಚಟುವಟಿಕೆ ಕೈಗೆತ್ತಿಕೊಳ್ಳಬೇಕಾದರೂ ಅದರ ಹಿನ್ನೆಲೆಯಲ್ಲಿ ಒಂದು ಅಧ್ಯಯನ ಇರಬೇಕು. ಅಧ್ಯಯನದಿಂದಲೇ ಅಭಿವೃದ್ಧಿ ಕಾರ್ಯಗಳು ಹೇಗೆ ಅನುಷ್ಠಾನಗೊಳ್ಳುತ್ತಿವೆ, ಆ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಮಾಡಿಕೊಳ್ಳಬೇಕಾದ ಬದಲಾವಣೆಗಳೇನು ಎಂಬಿತ್ಯಾದಿ ವಿಷಯಗಳು ಸ್ಪಷ್ಟವಾಗುತ್ತವೆ.

ಉದಾಹರಣೆಗಾಗಿ ಕೆಲವು ಶೀರ್ಷಿಕೆಗಳನ್ನು ಗಮನಿಸಬಹುದು.

1. ಚೆಟ್ಟಳ್ಳಿ ಕ್ಲಸ್ಟರ್‌ನಲ್ಲಿನ ಮುಖ್ಯಶಿಕ್ಷಕರ ಆಡಳಿತ ತೀರ್ಮಾನಗಳು - ಒಂದು ಅಧ್ಯಯನ.
2. ಹೆಬ್ಬಾಲೆ ಕ್ಲಸ್ಟರ್ ನಲ್ಲಿನ ಶಿಕ್ಷಕರ ವೈಜ್ಞಾನಿಕ ಮನೋಭಾವ - ಒಂದು ಅಧ್ಯಯನ.
3. ಗುಡ್ಡಗಾಡು ಪ್ರದೇಶಗಳ ಶಾಲೆಯ ಮಕ್ಕಳ ಕನ್ನಡ ಶಬ್ದಭಂಡಾರದ ಅಧ್ಯಯನ
4. ಸೋಮವಾರ ಪೇಟೆ ಕ್ಷೇತ್ರದಲ್ಲಿ ಪ್ರಾಥಮಿಕಶಾಲೆಯಲ್ಲಿ ವೈಜ್ಞಾನಿಕ ಪ್ರಯೋಗಗಳ ಬಳಕೆ - ಒಂದು ಅಧ್ಯಯನ.
5. ಕನ್ನಡ ಭಾಷಾ ಬೋಧನೆಯಲ್ಲಿ ಕಥನ ಪದ್ಧತಿಯ ಬಳಕೆ ಒಂದು ಅಧ್ಯಯನ.(ನಿರ್ದಿಷ್ಟ ಶಾಲೆ/ಕ್ಷೇತ್ರ)
6. ಶಿರಂಗಾಲ ಕ್ಲಸ್ಟರ್‌ನ ಪ್ರಾಥಮಿಕ ಶಾಲೆಗಳ 1ನೇ ತರಗತಿಯ ವಿದ್ಯಾರ್ಥಿಗಳ ಭಾಷಾ ಮತ್ತು ಗಣಿತ ಸಾಮರ್ಥ್ಯಗಳಿಕೆ ಒಂದು ಅಧ್ಯಯನ.

ಹೀಗೆ ಹತ್ತು ಹಲವಾರು , ಆಯಾಜಿಲ್ಲೆಯ ಶೈಕ್ಷಣಿಕ ಬೇಡಿಕೆಗೆ ಅನುಗುಣವಾಗಿ ಅಧ್ಯಯನಗಳನ್ನು ಕೈಗೊಳ್ಳಬಹುದು.

**ಅಧ್ಯಯನದಲ್ಲಿ ಬಳಸಬಹುದಾದ ಸಾಧನಗಳು**

ಅಧ್ಯಯನ ಕೈಗೊಳ್ಳುವಾಗ ಅಧ್ಯಯನದ ಸ್ವರೂಪಕ್ಕನುಗುಣವಾಗಿ ಸಾಧನಗಳ ಅಯ್ಕೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಹಲವಾರು ಆಯ್ಕೆಗಳು ಅಧ್ಯಯನಕಾರನಿಗೆ ಲಭ್ಯವಿದ್ದು. ಅಧ್ಯಯನ ವಿನ್ಯಾಸಕ್ಕನುಗುಣವಾಗಿ ಅದರ ಸ್ವರೂಪವನ್ನು ನಿರ್ಧರಿಸಬಹುದು. ಕೆಲವೊಮ್ಮೆ ಅಧ್ಯಯನಕಾರನು ತನ್ನದೇ ಆದ ಸಾಧನವನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕಾಗುತ್ತದೆ.

- ಪ್ರಶ್ನಾವಳಿ
- ಬುದ್ಧಿಶಕ್ತಿ ಪರೀಕ್ಷಣಗಳು(ಮಾನಕೀಕೃತ)
- ವ್ಯಕ್ತಿತ್ವ ಅಧ್ಯಯನ ಪರೀಕ್ಷೆಗಳು(ಮಾನಕೀಕೃತ)
- ಆಸಕ್ತಿ ಅಧ್ಯಯನ ದರ್ಜಾಮಾಪನಿಗಳು(ಮಾನಕೀಕೃತ)
- ಅಭಿಕ್ಷಮತೆಯ ಪರೀಕ್ಷಣಗಳು(ಮಾನಕೀಕೃತ)
- ಪ್ರಯೋಗಗಳು
- ಇತರ ಸಾಧನಗಳು (ಅಧ್ಯಯನಕಾರರೇ ಸ್ವತಃ ಅಭಿವೃದ್ಧಿಪಡಿಸಿಕೊಂಡಂತಹವುಗಳು)

ಅಧ್ಯಯನಗಳು ವಿವಿಧ ರೀತಿಯವುಗಳಾಗಿರಬಹುದು.

1. ಸಂಶೋಧನೆಗಳು
2. ಸಮೀಕ್ಷೆಗಳು
3. ಕ್ರಿಯಾ ಸಂಶೋಧನೆ
4. ಪ್ರಯೋಗಾಲಯ ಕ್ಷೇತ್ರ ಚಟುವಟಿಕೆಗಳು
5. ಬಹುಕೇಂದ್ರೀಯ ಅಧ್ಯಯನಗಳು
6. ಪ್ರಕರಣ ಅಧ್ಯಯನಗಳು

## ಸಂಶೋಧನೆ: ಅರ್ಥ ಮತ್ತು ಪರಿಕಲ್ಪನೆ

ಸಂಶೋಧನೆಯನ್ನು 'ಸೂತ್ರಗಳಿಗೆ, ಸಿದ್ಧಾಂತಗಳಿಗೆ, ಸಾಮಾನ್ಯೀಕರಣಕ್ಕೆ ಅನುವು ಮಾಡಿಕೊಡುವ, ಭಾವೀ ಘಟನೆಗಳನ್ನು ಮುನ್ನುಡಿಯಬಲ್ಲ, ಕೊನೆಯಲ್ಲಿ ನಿಯಂತ್ರಿಸಲೂ ಸಾಧ್ಯವಿರುವ, ನಿಯಂತ್ರಿತ ಅವಲೋಕನಗಳ ವ್ಯವಸ್ಥಿತ ಹಾಗೂ ವಿಷಯನಿಷ್ಠ ದಾಖಲೀಕರಣ ಹಾಗೂ ವಿಶ್ಲೇಷಣೆ' ಎಂಬುದಾಗಿ ವ್ಯಾಖ್ಯಾನಿಸಲಾಗಿದೆ,(ಜಾನ್ ಡಬ್ಲ್ಯು ಬೆಸ್ಟ್, 1981)

ಸಂಶೋಧನೆ ಎಂದರೆ ಹೊಸತನ್ನು ಹುಡುಕುವ ಒಂದು ರಚನಾತ್ಮಕ ಪ್ರಕ್ರಿಯೆ. "ಸಂಶೋಧನೆ ಹೊಸತನ್ನು, ಘಟನೆಗಳನ್ನು, ವರ್ತನೆಗಳನ್ನು, ಶೋಧಿಸುವ, ವಿವರಿಸುವ, ಒಂದು ಕ್ರಿಯಾತ್ಮಕವಾದ ಹಾಗೂ ವ್ಯವಸ್ಥಿತವಾದ ಪ್ರಕ್ರಿಯೆ" ಹೀಗೆಂದು ವಿಕಿಪೀಡಿಯ ವೆಬ್ ಸೈಟ್ ಹೇಳುತ್ತದೆ.

ಸಂಶೋಧನೆ ಎಂಬ ಪದ ನಿಮಗೆ ಯಾವ ಅರ್ಥ ನೀಡುತ್ತದೆ ಎಂಬುದನ್ನು ಯೋಚಿಸಿ. ಬೇರೆ ಬೇರೆ ಪದಕೋಶಗಳನ್ನು ನೋಡಿ. ಸಂಶೋಧನಾ ವಿಧಾನಗಳ ಬಗೆಗೆ ಇರುವ ಪುಸ್ತಕಗಳನ್ನು ನೋಡಿ. ಸಂಶೋಧನೆ ಎಂದರೆ ಸಂಪೂರ್ಣವಾಗಿ ಶೋಧಿಸಲ್ಪಟ್ಟದ್ದು ಎಂದು ಹೇಳಬಹುದೇ? ಸಂಶೋಧನೆ ಯಾವಾಗಲೂ ಹೊಸತನ್ನೇ ನೀಡಬೇಕೇ? ಸಂಶೋಧನೆಯೆಂದರೆ ಇರುವ ವಿಷಯಗಳನ್ನೇ ಹೊಸ ದೃಷ್ಟಿಕೋನದಿಂದ ವಿಶ್ಲೇಷಿಸುವುದೇ? ಸಂಶೋಧನೆಯೆಂದರೆ ಸಮಸ್ಯಾ ಪರಿಹಾರ ಚಟುವಟಿಕೆಯೇ?

**ಚಟುವಟಿಕೆ 2**

**ಸಂಶೋಧನೆ ಎಂದರೇನು? ಎಂದು ನಿಮ್ಮ ಸಹೋದ್ಯೋಗಿಗಳೊಡನೆ ಚರ್ಚಿಸಿ. ಸಂಶೋಧನೆ0ಯ ಮುಖ್ಯ ಲಕ್ಷಣಗಳನ್ನು ಗುಂಪುಚರ್ಚೆ0ಯ ಬಳಿಕ ಪಟ್ಟಿಮಾಡಿ.**

ಸಂಶೋಧನೆ ಯನ್ನು ಎರಡು ರೀತಿಯಾಗಿ ವರ್ಗೀಕರಿಸುತ್ತಾರೆ. ಅವೆಂದರೆ:

1. ಮೂಲಭೂತ ಸಂಶೋಧನೆ
2. ಅನ್ವಯಿಕ ಸಂಶೋಧನೆ

ಮೂಲಭೂತ ಸಂಶೋಧನೆಯೆಂದರೆ ಸೈದ್ಧಾಂತಿಕವಾಗಿ ಸಂಶೋಧಕನ ಕುತೂಹಲ ಹಾಗೂ ಜ್ಞಾನದ ಬೇಡಿಕೆಯನ್ನು ತಣಿಸಲು ಕೈಗೊಂಡ ಕಾರ್ಯವಗಿರುತ್ತದೆ. ಇದೊಂದು ತಾತ್ವಿಕ ವಿಚಾರ ಮಂಡನೆಯಾಗಿರುತ್ತದೆ. ವಸ್ತುಗಳ ಗುಣ ಮತ್ತು ರಚನೆ, ಇತಿಹಾಸ, ಸ್ವರೂಪ ಮುಂತಾದುವುಗಳ ಕುರಿತು ಅಂತಿಮ ಎನ್ನಬಹುದಾದ ನಿಲುವನ್ನು ವ್ಯಕ್ತಪಡಿಸಿರುತ್ತದೆ. ಮನುಷ್ಯನ ಜ್ಞಾನಭಂಡಾರವನ್ನು ಬೆಳೆಸುವುದೇ ಇದರ ಮುಖ್ಯ ಉದ್ದೇಶವಾಗಿರುತ್ತದೆ. ಉದಾಹರಿಸುವುದಾದರೆ:

(ಅ) ಸೋಲಿಗರು ಅವರ ಆಚರಣೆ ಹಾಗೂ ಅರಣ್ಯದ ಸಂಬಂಧದ ಕುರಿತ ಸಂಶೋಧನೆ.
(ಬ) ಪದ್ಯಬೋಧನೆಯ ಇತಿಹಾಸದ ಕುರಿತ ಸಂಶೋಧನೆ.
(ಕ) ಕಲಿಕೆಯ ಕುರಿತಾದ ಸಂಶೋಧನೆಗಳು.
(ಡ) ಭೌತ ಹಾಗೂ ರಸಾಯನಶಾಸ್ತ್ರದಲ್ಲಿ ವಸ್ತುಗಳ ಗುಣ ಮತ್ತು ರಚನೆ ಕುರಿತ ಸಂಶೋಧನೆಗಳು.

ಹೀಗೆ ಕೇವಲ ಜ್ಞಾನ, ಕುತೂಹಲದ ತಣಿಯುವಿಕೆ, ಅರ್ಥೈಸುವಿಕೆಗಾಗಿಯೇ ಮೂಲಭೂತ ಸಂಶೋಧನೆ ಮಾಡಲಾಗಿರುತ್ತದೆಯೇ ಹೊರತು, ಅದರಿಂದ ಪ್ರಾಯೋಗಿಕವಾಗಿ, ತಕ್ಷಣದ ಪ್ರಯೋಜನ ಪಡೆಯಬೇಕೆಂದು ಅಲ್ಲ.

ಅನ್ವಯಿಕ ಸಂಶೋಧನೆಯ ಮುಖ್ಯ ಗುರಿಯೇ ಮೂಲಭೂತ ಸಂಶೋಧನೆಗಳ ಫಲಿತಾಂಶಗಳ ಪ್ರಾಯೋಗಿಕ ಉಪಯುಕ್ತತೆಯನ್ನು ಕುರಿತದ್ದಾಗಿರುತ್ತದೆ. ಅನ್ವಯಿಕ ಸಂಶೋಧನೆಯನ್ನು ನಿರ್ದಿಷ್ಟವಾದ ಸಮಸ್ಯೆಗಳ ಪರಿಹಾರಕ್ಕಾಗಿ ಮೂಲಭೂತ ಸಂಶೋಧನೆಯ ಪ್ರಯೋಜನವನ್ನು ಪಡೆಯುವಕ್ರಮ/ವಿಧಾನ ಎಂದೂ ಹೇಳಬಹುದು. ಉದಾಹರಣೆಗೆ:

(ಅ) ಕಲಿಕೆಯ ಕುರಿತಾದ ಒಂದು ಸಿದ್ದಾಂತದ ಪ್ರಾಯೋಗಿಕ ಅನ್ವಯದ ಕುರಿತು ಸಂಶೋಧಿಸುವುದು. ಉದಾಹರಣೆಗೆ ವಿಕಾಸಾತ್ಮಕಕಾರ್ಯಗಳನ್ನು ಬಳಸಿ ವಿಕಾಸದ ಗತಿಯನ್ನು ಸಹಜವಾಗಿ ಪಡೆಯಲು ಬೇಕಾದ ಉಪಕರಣವನ್ನು ರೂಪಿಸುವುದು.

(ಆ) ಪರಮಾಣು ವಿಘಟನೆಯ ಶಕ್ತಿಯಿಂದ ವಿದ್ಯುತ್ ಶಕ್ತಿ ಪಡೆಯುವುದು.

ಹೀಗೆ ಈ ರೀತೀಯ ಸಂಶೋಧನೆಗಳಲ್ಲಿ ಪ್ರಾಯೋಗಿಕ ಉಪಯುಕ್ತತೆಯೆ ಗುರಿಯಾಗಿರುತ್ತದೆ. ಮಾತ್ರವಲ್ಲದೆ ಮೂಲಭೂತ ಸಂಶೋಧನೆಯ ಸಮರ್ಪಕತೆಯನ್ನು ಪರಿಶೀಲಿಸಲು ಕೂಡ ಇಂತಹ ಸಂಶೋಧನೆಯನ್ನು ಕೈಗೊಳ್ಳಬಹುದು. ಜ್ಞಾನಾರ್ಜನೆ ಇಲ್ಲಿನ ಮುಖ್ಯ ಉದ್ದೇಶವಲ್ಲ. ಜ್ಞಾನದ ಬಳಕೆಯೇ ಇಲ್ಲಿನ ಕೇಂದ್ರ ಉದ್ದೇಶ. ನಾವು ಬಳಸುತ್ತಿರುವ ಫ್ಯಾನ್‌ಗಳು, ಮೋಟಾರು ವಾಹನಗಳು, ಮಿಕ್ಸರ್‌ಗಳು ಮೂಲಭೂತ ಸಂಶೋಧನೆಗಳು ಕಂಡುಕೊಂಡ ಸತ್ಯಗಳ ಆಧಾರದಲ್ಲಿ ನಮ್ಮ ಬಳಕೆಗಾಗಿ ತಯಾರು ಮಾಡುದ ವಸ್ತುಗಳು. ಇವೆಲ್ಲವೂ ಅನ್ವಯಿಕ ಸಂಶೋಧನೆಯ ಫಲ.

ಶಿಕ್ಷಣ ಕ್ಷೇತ್ರವು ಅನ್ವಯಿಕ ಸಂಶೋಧನೆಗೆ ಸಾಕಷ್ಟು ಅವಕಾಶಗಳನ್ನು ನೀಡುತ್ತದೆ. ಶಿಕ್ಷಣದಲ್ಲಿ ವಿವಿಧ ಜ್ಞಾನಶಾಖೆಗಳಲ್ಲಿ ಲಭ್ಯವಿರುವ ಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳುವುದೇ ಮುಖ್ಯವಾಗುತ್ತದೆ. ಉದಾಹರಣೆಗೆ ತತ್ವಶಾಸ್ತ್ರ, ಮನೋವಿಜ್ಞಾನವೇ ಮೊದಲಾದ ಕ್ಷೇತ್ರಗಳಲ್ಲಿ ಲಭ್ಯವಿರುವ ಜ್ಞಾನವನ್ನು ಶಿಕ್ಷಣ ಕ್ಷೇತ್ರಕ್ಕೆ ಅನ್ವಯ ಮಾಡಿಕೊಳ್ಳುವುದಕ್ಕಾಗಿಯೇ ಶೈಕ್ಷಣಿಕ ತತ್ವ ಶಾಸ್ತ್ರ, ಶೈಕ್ಷಣಿಕ ಮನೋವಿಜ್ಞಾನ ಮೊದಲಾದ ಕಲಿಕಾ ವಿಷಯಗಳು ಇರುತ್ತವೆ. ಇವುಗಳಿಗೆ ಸಂಬಂಧಿಸಿದಂತಹ ಸಂಶೋಧನೆಗಳೂ ಅನ್ವಯಿಕ ಸಂಶೋಧನೆಗಳೇ ಆಗುತ್ತವೆ.

ಮೂಲಭೂತ ಸಂಶೋಧನೆಗಳನ್ನು ಕೈಗೊಳ್ಳುವಾಗ ಆಯಾ ಕ್ಷೇತ್ರದಲ್ಲಿ ಅದುವರೆಗೂ ಆಗಿರುವ ಸಮಸ್ತ ಸಂಶೋಧನೆಗಳ ಪರಿಚಯ, ತಾತ್ವಿಕ ಸಿದ್ಧಾಂತಗಳ ಪರಿಚಯ, ಸಂಶೋಧಕರ ವೈಯಕ್ತಿಕ ನಿಲುವುಗಳು ಬಹಳ ಮುಖ್ಯವಾಗುತ್ತವೆ. ಅನ್ವಯಿಕ ಸಂಶೋಧನೆಯಲ್ಲಿ ಯಾವುದೋ ಒಂದು ಸಿದ್ಧಾಂತದ ಅಳವಡಿಕೆ ಗುರಿಯಾಗಿರುತ್ತದೆ. ಆದರೆ ಅನ್ವಯಿಕ ಸಂಶೋಧಕರಿಗೂ ಮೂಲಭೂತ ಸಂಶೋಧಕರಿಗೆ ಇರುವಂತಹ ಅರಿವು ಇದ್ದರೆ ಉತ್ತಮ. ಇದರಿಂದ ಹೆಚ್ಚು ಸಾರ್ವಕಾಲಿಕವಾದ, ಹೆಚ್ಚು ವಿದ್ಯಾರ್ಥಿಗಳನ್ನು ತಲುಪಬಲ್ಲ ವಿಷಯಗಳ ಕುರಿತಾಗಿ ಸಂಶೋಧನೆ ನಡೆಸಲು ಸಾಧ್ಯವಾಗುತ್ತದೆ. ಸೀಮಿತ ಜ್ಞಾನದಲ್ಲಿ ನಡೆಸುವ ಅನ್ವಯಿಕ ಸಂಶೋಧನೆಗಳು ಒಮ್ಮೆಗೆ ಉತ್ತಮ ಫಲಿತಾಂಶ ತೋರಿದರೂ ಕಾಲಕ್ರಮದಲ್ಲಿ ಅವುಗಳ ದೌರ್ಬಲ್ಯಗಳೂ ಎದ್ದು ಕಾಣಲು ಆರಂಭಿಸುತ್ತವೆ. ತಾತ್ವಿಕ ತಳಹದಿ ಸುಸ್ಥಿರವಾಗಿದ್ದಷ್ಟೂ ಅನ್ವಯಿಕ ಸಂಶೋಧನೆಗಳು ಹೆಚ್ಚು ಕಾಲ ಬಾಳುವ ಫಲಿತಾಂಶಗಳನ್ನು ನೀಡಬಲ್ಲವು.

***ಚಟುವಟಿಕೆ 3***

ಡಯಟ್ ನ ಉಪನ್ಯಾಸಕರು ಯಾವ ರೀತಿಯ ಸಂಶೋಧನೆಗಳನ್ನು ಹೆಚ್ಚು ಯಶಸ್ವಿಯಾಗಿ ಕೈಗೊಳ್ಳಬಲ್ಲರು ಎಂಬುದನ್ನು ಚರ್ಚಿಸಿ. ನಿಮ್ಮ ಉತ್ತರಕ್ಕೆ ಕಾರಣಗಳನ್ನು ಪಟ್ಟಿಮಾಡಿಕೊಳ್ಳಿ.

**ಸಂಶೋಧನೆಯಲ್ಲಿ ಮಾಹಿತಿ ಸಂಗ್ರಹಣಾ ವಿಧಾನಗಳು**.

- ಪ್ರಯೋಗಗಳು
- ಸಹಭಾಗೀ ಅವಲೋಕನ
- ಸಂದರ್ಶನ
- ಸಮೀಕ್ಷೆ
- ವೀಕ್ಷಣೆ
- ಪ್ರಶ್ನಾವಳಿಗಳು
- ಬುದ್ಧಿಶಕ್ತಿ ಪರೀಕ್ಷೆಗಳು

***ಚಟುವಟಿಕೆ 4***

***ಸಂಶೋಧನೆಗಳಲ್ಲಿ ಮಾಹಿತಿ ಸಂಗ್ರಹಣಾ ವಿಧಾನಗಳ ಕುರಿತಾಗಿರುವ ಪುಸ್ತಕಗಳನ್ನು ಓದಿ. ಡಯಟ್ ನ ಸಂದರ್ಭದಲ್ಲಿ ಯಾವ ರೀತಿಯ ಅಧ್ಯಯನಗಳಿಗೆ ಯಾವ ರೀತಿಯ ಮಾಹಿತಿ ಸಂಗ್ರಹಣೆ ಅಗತ್ಯ ಎಂದು ಸಹೋದ್ಯೋಗಿಗಳೊಡನೆ ಚರ್ಚಿಸಿ.***

**ಸಂಶೋಧನೆಯ ಹಂತಗಳು**.

ಸಂಶೋಧನೆಯು ವಿವಿಧ ಹಂತ ಹಾಗೂ ಗತಿಯಲ್ಲಿ ಸಾಗುವ ಒಂದು ವ್ಯವಸ್ಥಿತ ಪ್ರಕ್ರಿಯೆ. ಇದನ್ನು ಕೆಳಕಂಡಂತೆ ಪಟ್ಟಿಮಾಡಬಹುದು.

- ವಿಷಯ/ಸಂಶೋಧನಾ ಶೀರ್ಷಿಕೆಯ ಆಯ್ಕೆ.
- ಸಂಬಂಧಿಸಿದ ಸಾಹಿತ್ಯ ಅಧ್ಯಯನ ಹಾಗೂ ವಿಷಯವನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವುದು
- ಆಧಾರ ಕಲ್ಪನೆಗಳ ರಚನೆ
- ಸಂಶೋಧನಾ ವಿಧಾನಗಳನ್ನು ನಿರ್ಧರಿಸುವುದು
- ದತ್ತಾಂಶ ಸಂಗ್ರಹ / ಕ್ಷೇತ್ರ ಕಾರ್ಯ/ ಪ್ರಯೋಗ/ ವೀಕ್ಷಣೆ/ ಇತ್ಯಾದಿ.
- ದತ್ತಾಂಶ ವಿಶ್ಲೇಷಣೆ / ಕ್ಷೇತ್ರ ಕಾರ್ಯ/ ಪ್ರಯೋಗ/ ವೀಕ್ಷಣೆ/ಇತ್ಯಾದಿಗಳ ವಿಶ್ಲೇಷಣೆ
- ಆಧಾರ (ಪ್ರಾಕ್) ಕಲ್ಪನೆಗಳ ಪುನರ್ವಿಮರ್ಶೆ ಹಾಗೂ ತೀರ್ಮಾನ
- ವರದಿ ತಯಾರಿಕೆ.

## ಸಮೀಕ್ಷೆ: ಅರ್ಥ ಮತ್ತು ಪರಿಕಲ್ಪನೆ

ಶೈಕ್ಷಣಿಕ ಮತ್ತು ಇತರ ಕ್ಷೇತ್ರಗಳಲ್ಲಿ ಪರಿಮಾಣಾತ್ಮಕ ಮಾಹಿತಿಯನ್ನು ಪಡೆಯಬೇಕಾದ ಹಾಗೂ ಅದನ್ನು ವಿಶ್ಲೇಷಿಸಿ ಹಲವಾರು ತೀರ್ಮಾನ, ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಪರಿಮಾಣಾತ್ಮಕ ಮಾಹಿತಿಯ ಸಂಗ್ರಹಕ್ಕೆ ಸಮೀಕ್ಷೆ ಒಂದು ಉತ್ತಮ ತಂತ್ರ, ಇದರ ವ್ಯಾಪಕ ಬಳಕೆಯೆ ಇದರ ಜನಪ್ರಿಯತೆಯನ್ನು ತೋರಿಸುತ್ತದೆ. ಸಮೀಕ್ಷೆ ಎಂದರೆ ಪರಿಮಾಣಾತ್ಮಕ ಹಾಗೂ ಗುಣಾತ್ಮಕ ಸೂಚಕಗಳ  ಮಾಹಿತಿಯನ್ನು ಸೂಕ್ತ ಸಾಧನಗಳನ್ನು ಬಳಸಿ ಸಂಗ್ರಹಿಸಿ ಅದನ್ನು ವಿಶ್ಲೇಷಿಸುವುದಾಗಿದೆ.  ಸಮೀಕ್ಷೆಯು ಮುಖ್ಯವಾಗಿ ಅಭಿಪ್ರಾಯ, ಮತ್ತು ನೈಜಸ್ಥಿತಿಯ ಮಾಹಿತಿಯನ್ನು ಕುರಿತದ್ದಾಗಿರುತ್ತದೆ. ಪ್ರಶ್ನಾವಳಿಯನ್ನು ಹಲವಾರು ವ್ಯಕ್ತಿಗಳಿಗೆ ನೀಡಿ ಮಾಹಿತಿ ಸಂಗ್ರಹಿಸಬಹುದು. ಸ್ವಯಂ ವರದಿಯ ಹಾಳೆಗಳು, ಸಂದರ್ಶನಗಳ   ಮೂಲಕವೂ ಮಾಹಿತಿ ಸಂಗ್ರಹಿಸಬಹುದು.

### ಸಮೀಕ್ಷೆಯ ಪ್ರಯೋಜನಗಳು

ಸಮೀಕ್ಷೆಯು ಈಗಾಗಲೇ ಹೇಳಿರುವಂತೆ ಒಂದು ಉತ್ತಮ ಸಂಶೋಧನಾ ವಿಧಾನವಾಗಿದೆ. ಇದು ಶೈಕ್ಷಣಿಕವಾಗಿ ಹಲವಾರು ಪ್ರಯೋಜನಗಳನ್ನು ಹೊಂದಿದೆ. ಅವುಗಳನ್ನು ಕೆಳಕಂಡಂತೆ ಪಟ್ಟಿಮಾಡಬಹುದು.

- ಸಮೀಕ್ಷೆಯ ಮೂಲಕ ಅತ್ಯಂತ ಹೆಚ್ಚು ಸಂಖ್ಯೆಯ ವ್ಯಕ್ತಿಗಳಿಂದ ಮಾಹಿತಿಯನ್ನು ಸಂಗ್ರಹಿಸಬಹುದು.
- ಸಮೀಕ್ಷೆಯು ಕಲೆಹಾಕುವ ಮಾಹಿತಿಯ ವಿಚಾರದಲ್ಲಿ ಹೆಚ್ಚು ವ್ಯಾಪ್ತಿಯನ್ನು ಹೊಂದಿದೆ. ಉದಾಹರಣೆಗೆ ಮನೋಧೋರಣೆ, ಅಭಿಕ್ಷಮತೆ, ಆಸಕ್ತಿ, ಹಿಂದೆ ಸಂಭವಿಸಿದ ಘಟನೆಗಳು, ಅನುಭವಗಳು, ವರ್ತನೆಗಳು, ಮುಂತಾದುವುಗಳನ್ನು ಸಮೀಕ್ಷಿಸಬಹುದು.
- ಸ್ಥಳೀಯ ಸನ್ನಿವೇಶಕ್ಕೆ ಅನುಕೂಲಿಸುವ ಸಾಧನಗಳನ್ನು ಸಮೀಕ್ಷಕರೇ ರೂಪಿಸಿಕೊಳ್ಳಬಹುದು.
- ಸಮೀಕ್ಷಾಕಾರ್ಯ ಬೇರೆಲ್ಲಾ ವಿಧಾನಗಳಿಗಿಂತ ಸುಲಭವಾಗಿ ನಿರ್ವಹಿಸಬಹುದಾದ ವಿಧಾನ.
- ಈ ವಿಧಾನದ ಬಳಕೆಯಿಂದ ಅಗತ್ಯ ವಿಷಯದ ಕಡೆಗೆ ಮಾತ್ರ ಸಮೀಕ್ಷೆಕಾರರ ಗಮನ ಹರಿಯುತ್ತದೆ. ಇದು ಮಾಹಿತಿ ಸಂಗ್ರಹಕಾಲದಲ್ಲಿ ವಸ್ತುನಿಷ್ಟತೆ ಕಾಪಾಡಲು ಸಹಾಯಕ.
- ಘಟನೆ, ನೀತಿಯ ಗತಿಶೀಲತೆಯನ್ನು ಗುರುತಿಸಲು ಇದು ಅತ್ಯಂತ ಉಪಯುಕ್ತವಿಧಾನ.

**ಸಮೀಕ್ಷಿಸುವಾಗ ವಹಿಸಬೆಕಾದ ಎಚ್ಚರಿಕೆಗಳು**

ಸಮೀಕ್ಷೆ ಒಂದು ಉತ್ತಮವಿಧಾನವಾದರೂ ಅದನ್ನು ಬಳಸುವಾಗ ಎಚ್ಚರಿಕೆವಹಿಸದಿದ್ದರೆ, ಲಭಿಸುವ ಮಾಹಿತಿಗಳು ವಿಶ್ವಾಸಾರ್ಹತೆಯನ್ನು ಹೊಂದಿರುವುದಿಲ್ಲ. ಸಮೀಕ್ಷೆ ನಡೆಸುವವರು ವಹಿಸಬೇಕಾದ ಕೆಲವು ಎಚ್ಚರಿಕೆಗಳನ್ನು ಈ ಕೆಳಕಂಡಂತೆ ನೋಡಬಹುದು.

- ಸಾಧ್ಯವಾದಷ್ಟು ಪ್ರಾಮಾಣಿಕ ಉತ್ತರಗಳನ್ನು ನೀಡುವಂತೆ ಕಾಲಕಾಲಿಕ ಸೂಚನೆಗಳನ್ನು, ಪ್ರಶ್ನಾವಳಿಗೆ ಪ್ರತಿಕ್ರಿಯಿಸುವ ವ್ಯಕ್ತಿಗಳ ಗಮನಕ್ಕೆ ತರಬಹುದು. ಪ್ರಾಮಾಣಿಕ ಉತ್ತರಗಳನ್ನು ನೀಡುವಂತೆ ಅಭಿಪ್ರೇರಿಸಬಹುದು.
- ಸಂಕೀರ್ಣವಾದ ಸಾಮಾಜಿಕ ಘಟನಾವಳಿಗಳನ್ನು ಆಯ್ಕೆಮಾಡುವಾಗ ಎಚ್ಚರದಿಂದ ಆಯ್ಕೆಮಾಡಬೇಕು. ಅದು ಸಂಪೂರ್ಣ ಸಾಮಾಜಿಕ ಪ್ರಜ್ಞೆಯ ಪ್ರತಿನಿಧಿಸುವಿಕೆಯನ್ನು ಒಳಗೊಂಡಿರುವಂತೆ ಆಯ್ಕೆಮಾಡಬಹುದು.
- ಸಮೀಕ್ಷೆಗೆ ಒಂದು ಕಾಲಮಿತಿಯನ್ನು ಹಾಕಿಕೊಳ್ಳಬಹುದು.
- ಸಮೀಕ್ಷೆಗೆ ಬಳಸುವ ಸಾಧನಗಳು ವಿಶ್ವಾಸಾರ್ಹತೆಯಿಂದ ಕೂಡಿರುವಂತೆ ನೋಡಿಕೊಳ್ಳಬಹುದು.

**ಸಮೀಕ್ಷೆಯಲ್ಲಿ ಬಳಸುವ ಸಾಧನಗಳು**

1. ಪ್ರಶ್ನಾವಳಿ
2. ಸ್ವಯಂ ವರದಿಮಾಡುವ ಹಾಳೆ.
3. ದರ್ಜಾ ಮಾಪನಿ(ರೇಟಿಂಗ್ ಸ್ಕೇಲ್ಸ್)
4. ಸಂದರ್ಶನಗಳು

## ಪ್ರಕರಣ ಅಧ್ಯಯನ/ಕೇಸ್ ಸ್ಟಡಿ

ಪ್ರಕರಣ ಅಧ್ಯಯನವೆಂದರೆ ಯಾವುದಾದರೂ ಒಂದು ಘಟನೆ ಅಥವಾ ಒಬ್ಬ ವ್ಯಕ್ತಿಯ ಅಥವಾ ಒಂದು ಸಂಸ್ಥೆಯ ಕುರಿತಾದ ಅಧ್ಯಯನ. ಇಂತಹ ಅಧ್ಯನಗಳು ಶೈಕ್ಷಣಿಕ ಸಾಧನೆ/ಸಮಸ್ಯೆ/ ಮುಂತಾದ ವಿಚಾರಗಳ ಕುರಿತಾಗಿರ ಬಹುದು. ಇದು ಕೂಡ ಡಯಟ್ ಕೈಗೊಳ್ಳಬೇಕಾದ ಅಧ್ಯಯನಗಳಲ್ಲಿ ಒಂದು. ಈ ಅಧ್ಯಯನಗಳ ಫಲಶ್ರುತಿಯನ್ನು ಇತರ ಕ್ಷೇತ್ರಗಳಿಗೆ ವರ್ಗಾಯಿಸಬಹುದು.

**ಪ್ರಮುಖ ಲಕ್ಷಣಗಳು**

- ಈ ಅಧ್ಯಯನದ ಕೇಂದ್ರಬಿಂದು ನಿರ್ದಿಷ್ಟ ಸಮಸ್ಯೆ/ಘಟನೆ/ವ್ಯಕ್ತಿಯಾಗಿರಬಹುದು.
- ಇಲ್ಲಿ ಬರುವ ತೀರ್ಮಾನಗಳನ್ನು ಆಧರಿಸಿ ಆ ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿದ ಸಮಸ್ಯೆಗೆ ಪರಿಹಾರ ರೂಪಿಸಬಹುದು. ಉಳಿದ ಪ್ರಕರಣಗಳನ್ನು ಅರ್ಥಮಾಡಿಕೊಳ್ಳಲೂ ಈ ಮಾಹಿತಿ ಉಪಯುಕ್ತವಾಗಬಲ್ಲದು.
- ಇದು ವೈಜ್ಞಾನಿಕ ಅಧ್ಯಯನ ಕ್ರಮ.
- ಸರಳ ಮತ್ತು ಸುಲಭ ಅಧ್ಯಯನ ವಿಧಾನ
- ಘಟನೆಯ/ಸಮಸ್ಯೆಯ/ಸಾಧನೆಯ ನೈಜಕಾರಣವನ್ನು ಅನ್ವೇಷಿಸುತ್ತದೆ

**ಪ್ರಕರಣ ಅಧ್ಯಯನ ಕ್ರಮದ ಹಂತಗಳು**

- ಘಟನೆ/ವ್ಯಕ್ತಿಯ ಆಯ್ಕೆ.
- ಅಧ್ಯಯನ ವಿಧಾನಗಳ ನಿರೂಪಣೆ
- ಅಧ್ಯಯನದ ಅನುಷ್ಠಾನ
- ದತ್ತಾಂಶ/ಮಾಹಿತಿ ಸಂಗ್ರಹಣೆ
- ದತ್ತಾಂಶ/ಮಾಹಿತಿ ವಿಶ್ಲೇಷಣೆ.
- ಕಾರಣ/ತೀರ್ಮಾನ ರೂಪಣೆ.
- ಪರಿಹಾರ ರೂಪಣೆ
- ವರದಿ

**ದತ್ತಾಂಶ /ಮಾಹಿತಿ ಸಂಗ್ರಹದ ಮೂಲಗಳು**

1. ವ್ಯಕ್ತಿಯ ದಿನಚರಿ, ವೈಯಕ್ತಿಕ ದಾಖಲೆಗಳು, ವೈದ್ಯಕೀಯ ದಾಖಲೆಗಳು, ಇತ್ಯಾದಿ(ಪ್ರಾಥಮಿಕ ಮೂಲ)
2. ತಜ್ಞರು, ಶಿಕ್ಷಕರು, ತಂದೆ ತಾಯಿ ಅಧಿಕಾರಿಗಳು, ಸ್ನೇಹಿತರು, ಸಂಬಂಧಿತ ವ್ಯಕ್ತಿಗಳು, ವೈದ್ಯರು ಇತ್ಯಾದಿಯವರಿಂದ ಸಂಗ್ರಹ( ಆನುಷಂಗಿಕ ಮೂಲ)

**ದತ್ತಾಂಶ /ಮಾಹಿತಿ ಸಂಗ್ರಹದ ವಿಧಾನಗಳು ಮತ್ತು ಸಾಧನಗಳು**

- ಸಂದರ್ಶನ ( ಸಂದರ್ಶನ ಪೂರ್ವರಚಿತ ಪ್ರಶ್ನೆಗಳಪಟ್ಟಿ, ಟಿಪ್ಪಣಿ ಪುಸ್ತಕ, )
- ದಿನಚರಿ ಅಧ್ಯಯನ
- ಆಸಕ್ತಿ ತಪಶೀಲುಪಟ್ಟಿ, ಪ್ರಶ್ನಾವಳಿ,ಮನೋಧೋರಣೆ ದರ್ಜಾಮಾಪನಿ, ಇತ್ಯಾದಿಗಳು.
- ಇತರ ಅಧ್ಯಯನಗಳ ಬಳಕೆ.
- ಅವಲೋಕನ

## ಕ್ರಿಯಾ ಸಂಶೋಧನೆ

ನಮ್ಮ ವೃತ್ತಿಯಲ್ಲಿ ಎದುರಾಗುವ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಪರಿಹರಿಸಿಕೊಳ್ಳುವ ಸಲುವಾಗಿ ಕೈಗೊಳ್ಳುವ ಸಂಶೋಧನೆಗೆ ಕ್ರಿಯಾಸಂಶೋಧನೆ ಎನ್ನುತ್ತಾರೆ. ಇಲ್ಲಿ ವೃತ್ತಿ ನಿರತರು ಸ್ವಾವಲೋಕನ ಹಾಗೂ ಸ್ವವಿಮರ್ಶೆಗಳ ಮೂಲಕ ತಮ್ಮ ವೃತ್ತಿವೃತ್ತಿಪರತೆಯನ್ನು ಹೆಚ್ಚಿಸಿಕೊಳ್ಳುತ್ತಾರೆ. ತಕ್ಷಣದ ಸಮಸ್ಯೆಗೆ ತಕ್ಷಣದ ಪರಿಹಾರಗಳನ್ನು ಕಂಡುಕೊಳ್ಳಲು ಸಹಾಯ ಮಾಡುವ ಕ್ರಿಯಾಸಂಶೋಧನೆಯ ಫಲಿತಾಂಶಗಳನ್ನು ಸಾಮಾನ್ಯೀಕರಿಸಲು ಸಾಧ್ಯವಿಲ್ಲ. ಕ್ರಿಯಾ ಸಂಶೋಧನೆಯ ಪ್ರಕ್ರಿಯೆಯು ಈ ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ.

1. ಸಮಸ್ಯೆಗಳನ್ನು ಗುರುತಿಸುವುದು
2. ಸಮಸ್ಯೆಯ ವಿಶ್ಲೇಷಣೆ

3. ಸಂಭವನೀಯ ಕಾರಣಗಳ ಪಟ್ಟಿ ಮಾಡಿಕೊಳ್ಳುವುದು
4. ವಿವಿಧ ಕಾರಣಗಳನ್ನು ಅವುಗಳ ಸಾಮಾನ್ಯ ಲಕ್ಷಣಗಳಿಗನುಗುಣವಾಗಿ ವಿಂಗಡಿಸಿಕೊಂಡು ಸೈದ್ಧಾಂತಿಕ ನೆಲೆಗಟ್ಟುಗಳನ್ನು ರಚಿಸಿಕೊಳ್ಳುವುದು.
5. ಒಂದು ಸೈದ್ಧಾಂತಿಕ ನೆಲೆಗಟ್ಟಿನ ಆದ್ಯತೀಕರಣ
6. ಕ್ರಿಯಾ ಆಧಾರ ಕಲ್ಪನೆಯ ರಚನೆ
7. ಮಧ್ಯವರ್ತನಾ ಚಟುವಟಿಕೆಗಳ ಆಯೋಜನೆ
8. ಯೋಜನೆಯ ಅನುಷ್ಠಾನ
9. ಮಧ್ಯವರ್ತನಾ ಚಟುವಟಿಕೆಗಳ ಮೌಲ್ಯಮಾಪನ
10. ಸ್ವವಿಮರ್ಶೆ ಹಾಗೂ ನಿರ್ಧಾರಗಳನ್ನು ಕೈಗೊಳ್ಳುವುದು.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸರ್ವ ಶಿಕ್ಷಣ ಅಭಿಯಾನ, ಕರ್ನಾಟಕ ಪ್ರಕಟಿಸಿರುವ 'ಕ್ರಿಯಾ ಸಂಶೋಧನೆ – ತರಬೇತಿ ಕೈಪಿಡಿ' ಪುಸ್ತಕ ಓದಬಹುದು.

## ಪ್ರಯೋಗಾಲಯ ಕ್ಷೇತ್ರ ಅಧ್ಯಯನಗಳು

ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದಕ್ಕಾಗಿ ತಾನು ಹೆಚ್ಚು ವೃತ್ತಿಪರವಾಗಲು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ತನ್ನ ಕಾರ್ಯವ್ಯಾಪ್ತಿಯೊಳಗೆ ಪ್ರಯೋಗ, ಸಂಶೋಧನೆ ಮತ್ತು ಅಧ್ಯಯನಗಳನ್ನು ಕೈಗೊಳ್ಳಲು ಆಯ್ಕೆ ಮಾಡಿಕೊಳ್ಳುವ ನಿರ್ದಿಷ್ಟ ಕಾರ್ಯಕ್ಷೇತ್ರವೇ ಪ್ರಯೋಗಾಲಯ ಕ್ಷೇತ್ರ. ಈ ಕಾರ್ಯಕ್ಷೇತ್ರದಲ್ಲಿ ಡಯಟ್ ಸಿಬ್ಬಂದಿ ಇಲ್ಲಿ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ, ವಿವಿಧ ಶೈಕ್ಷಣಿಕ ವಿಚಾರಗಳ ಅನುಷ್ಠಾನದ ಕುರಿತಂತೆ ಶೈಕ್ಷಣಿಕ ಪ್ರಯೋಗಗಳನ್ನು ಅಥವಾ ಅಧ್ಯಯನಗಳನ್ನು ಕೈಗೊಳ್ಳಬಹುದು. ಈ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜು ಹಾಗೂ ಡಿ ಎಸ್ ಇ ಆರ್ ಟಿ ಜಂಟಿಯಾಗಿ 'ಪ್ರಯೋಗಾಲಯ ಕ್ಷೇತ್ರ ಯೋಜನೆ ಹಾಗೂ ಅದರ ಅನುಷ್ಠಾನಗೊಳಿಸುವಿಕೆ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿರುವ ಉಪಗ್ರಹ ಆಧಾರಿತ ತರಬೇತಿ ಕಾರ್ಯಕ್ರಮದ ಸಾಹಿತ್ಯವನ್ನು ಓದಿಕೊಳ್ಳಬಹುದು.

ಡಯಟ್‌ಗಳು ತಮ್ಮ ತಮ್ಮ ಅಧ್ಯಯನ ಸಂಶೋಧನೆಗಳ ಫಲಿತವನ್ನು ಹಂಚಿಕೊಳ್ಳಲು ಮತ್ತು ಸಂಪನ್ಮೂಲ ಮಾಹಿತಿ ಪಡೆಯಲು ಈ ಸಂಸ್ಥೆಗಳ ಜತೆ ಸಂಪರ್ಕವಿರಿಸಿಕೊಳ್ಳಬಹುದು.( ಈ ಸಂಸ್ಥೆಗಳ ವಿವರವನ್ನು ಇನ್ನೊಂದು ಅಧ್ಯಾಯದಲ್ಲಿ ವಿವರಿಸಿದೆ)

- N I E P A — N C E R T
- S R C — SIEMAT
- R I E — I S EC
- R I E S I — E D C
- C T E — EDCATION DEPARTMENT (UNIVERSITY)
- B R C — C R C
- IASE — NIAS

***ಚಟುವಟಿಕೆ 5***

ಸಂಶೋಧನೆ, ಅಧ್ಯಯನ, ಕ್ರಿಯಾ ಸಂಶೋಧನೆ, ಪ್ರಯೋಗಾಲಯ ಕ್ಷೇತ್ರ ಅಧ್ಯಯನ, ಪ್ರಕರಣ ಅಧ್ಯಯನ, ಸಮೀಕ್ಷೆಗಳು ಯಾವ ರೀತಿ ವಿಭಿನ್ನ ಉದ್ದೇಶಗಳಿಗೆ ಬಳಸಲ್ಪಡುತ್ತವೆ ಎಂಬುದನ್ನು ನಿಮ್ಮ ಸಹೋದ್ಯೋಗಿಗಳೊಡನೆ ಚರ್ಚಿಸಿ.

“ರಾಜ್ಯದ ವಿಭಿನ್ನ ಭಾಗಗಳಲ್ಲಿ ಇರುವ ಬಹುಮಂದಿ ಸಹಯೋಗಿಗಳು ಅಥವಾ ಸಹಭಾಗಿಗಳು ಮೊದಲೇ ನಿಗದಿಪಡಿಸಿದ ಒಂದು ನಿರ್ದಿಷ್ಟ ವಿಷಯಕ್ಕೆ ಅಥವಾ ವಿದ್ಯಮಾನಕ್ಕೆ ಅಥವಾ ಸಮಸ್ಯೆಗೆ ಸಂಬಂಧಿಸಿದಂತೆ ಸ್ಥಳೀಕ ವಿಶಿಷ್ಟತೆಗಳನ್ನು ಗುರುತಿಸುವ ಉದ್ದೇಶದೊಡನೆ ನಿರ್ದಿಷ್ಟ ಅವಧಿಯಲ್ಲಿ ಅಧ್ಯಯಿಸಿ ಅಥವಾ ಕಾರ್ಯನೀತಿಯ ಅನುಷ್ಠಾನದ ಸಮರ್ಪಕತೆಯನ್ನು ಪರೀಕ್ಷಿಸಿ ಯುಕ್ತ ಮಾಹಿತಿ ಒದಗಿಸುವ ಸಾಮರ್ಥ್ಯವುಳ್ಳ ಹಾಗೂ ತನ್ಮೂಲಕ ಕಾರ್ಯನೀತಿ ರೂಪಣೆಯನ್ನು ಪ್ರಭಾವಿಸಿ ವ್ಯವಸ್ಥೆಯ ಸಮಗ್ರ ಸುಧಾರಣೆಗೆ ಕಾರಣವಾಗಬಲ್ಲ ಒಂದೇ ವಿನ್ಯಾಸವುಳ್ಳ ಅಧ್ಯಯನಗಳು” ಎಂದು ಬಹುಕೇಂದ್ರಿತ ಅಧ್ಯಯನಗಳನ್ನು ವ್ಯಾಖ್ಯಾನಿಸಬಹುದು

**ಬಹುಕೇಂದ್ರಿತ ಅಧ್ಯಯನದ ಲಕ್ಷಣಗಳು**

- ವಿಸ್ತಾರವಾದ ಭೌಗೋಲಿಕ ಘಟಕದ ವಿಭಿನ್ನ ಭಾಗಗಳಲ್ಲಿ ಇರುವ ಬಹುಮಂದಿ ಸಂಶೋಧಕರು ಈ ಅಧ್ಯಯನದಲ್ಲಿ ಭಾಗವಹಿಸುತ್ತಾರೆ
- ಒಂದು ಕೇಂದ್ರತಂಡದ ಅಥವಾ ಒಬ್ಬ ಪ್ರಧಾನ ಸಂಶೋದಕನ ಮಾರ್ಗದರ್ಶನ ಮತ್ತು ಮೇಲುಸ್ತುವಾರಿಯಲ್ಲಿ ವಿಭಿನ್ನ ಸಂಶೋಧಕರು ಬಹುಕೇಂದ್ರಿತ ಅಧ್ಯಯನವನ್ನು ಮಾಡುತ್ತಾರೆ
- ಬಹುಕೇಂದಿತ ಅಧ್ಯಯನವು ಒಂದೇ ಕಾಲಾವಧಿಯಲ್ಲಿ ಎಲ್ಲ ಕೇಂದ್ರಗಳಲ್ಲಿ ಜರಗುವ ಸಹಯೋಗೀ ಸ್ವರೂಪದ ಚಟುವಟಿಕೆ
- ಬಹುಕೇಂದ್ರಿತ ಅಧ್ಯಯನವನ್ನು ಬಲು ದೊಡ್ಡ ಭೌಗೋಲಿಕ ಪ್ರದೇಶಕ್ಕೆ ಅಳವಡಿಸಬಹುದು
- ಬಹುಕೇಂದ್ರಿತ ಅಧ್ಯಯನಗಳು ಸಮಸ್ಯೆ ಆಥವಾ ವಿದ್ಯಮಾನಕ್ಕೆ ಸಂಬಂಧಿಸಿದಂತೆ ಸ್ಥಳೀಕ ಸೂಕ್ಷ್ಮ ಮತ್ತು ರಾಜ್ಯವ್ಯಾಪಿ ಸ್ಥೂಲ ಚಿತ್ರಗಳೆರಡನ್ನೂ ಪಡೆಯಲು ಅವಕಾಶ ಕಲ್ಪಿಸುತ್ತದೆ.

**ಬಹುಕೇಂದ್ರಿತ ಅಧ್ಯಯನದ ಉದ್ದೇಶಗಳು**.

- ❖ ರಾಜ್ಯದ ಕಾರ್ಯನೀತಿಯ ಯಶಸ್ವೀ ಅನುಷ್ಠಾನವನ್ನು ಅಥವಾ ರೂಪಣೆಯನ್ನು ಸುಸಂಗತ ಮಾಹಿತಿ ಒದಗಿಸಿ ಪ್ರಭಾವಿಸಬಲ್ಲ ಕ್ಷೇತ್ರಮಟ್ಟದ ಯಥಾರ್ಥತೆ ಅಥವಾ ನಿಜಸ್ಥಿತಿಯನ್ನು ತಿಳಿಯ ಬಹುದು.
- ❖ ಒಂದು ವಿಷಯ ಅಥವಾ ವಿದ್ಯಮಾನ ಅಥವಾ ಸಮಸ್ಯೆಗೆ ಸಂಬಂಧಿಸಿದಂತೆ ಯಾವುದೋ ಒಂದು ಸಮಯದಲ್ಲಿ ಮಾಡಿದ ಎಲ್ಲ ಸೂಕ್ಷಮ ಅಧ್ಯಯನಗಳ ಫಲಿತಾಂಶಗಳನ್ನು ಅರ್ಥಪೂರ್ಣವಾಗಿ ಒಗ್ಗೂಡಿಸಿ ರಾಜ್ಯಮಟ್ಟದ ಸ್ಥೂಲಚಿತ್ರವನ್ನು ಪಡೆಯಬಹುದು.
- ❖ ಶಿಕ್ಷಣದ ನಿರ್ದಿಷ್ಟ ಕಾರ್ಯನೀತಿಯ ಅನುಷ್ಠಾನವು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ನಿಗದಿಪಡಿಸಬಹುದು.
- ❖ ಹಾಲಿ ಕಾರ್ಯನೀತಿಯ ಬಗ್ಗೆ ಹಿಮ್ಮಾಹಿತಿ ಪಡೆದು ಅಗತ್ಯವಿದ್ದರೆ ಅದು ಅನುಷ್ಟಾನಗೊಳ್ಳುತ್ತಿರುವಾಗಲೇ ನಡುನಡುವೆ ಯುಕ್ತ ತಿದ್ದುಪಡಿಗಳನ್ನು ಮಾಡಬಹುದು.
- ❖ ಸಮಸ್ಯಾತ್ಮಕ ಅಂಶಗಳು ಬೃಹತ್ ವ್ಯವಸ್ಥೆಗಳಲ್ಲಿ ಆಳವಾಗಿ ಬೇರೂರಿರುವ ಸಂದರ್ಭಗಳಲ್ಲಿ ಕೂಲಂಕಷ ಅಧ್ಯಯನ ಮಾಡಬಹುದು.
- ❖ ಕ್ಷೇತ್ರದ ನಿಜಜೀವನ ಸನ್ನಿವೇಶಗಳಲ್ಲಿ ಎದುರಾದ ಶೈಕ್ಷಣಿಕ ಸಮಸ್ಯೆಗಳು ಉದ್ಭವಿಸಲು ಕಾರಣವಾದ ಅಂಶಗಳ ಮೇಲೆ ಬೆಳಕು ಚೆಲ್ಲಬಹುದು.

**ಬಹುಕೇಂದ್ರಿತ ಅಧ್ಯಯನವನ್ನು ಕೈಗೊಳ್ಳಬಹುದಾದ ಕ್ಷೇತ್ರಗಳಿಗೆ ಕೆಲವು ಉದಾಹರಣೆಗಳು**

- ✓ ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲು ಕ್ಷೇತ್ರದ ಸಿದ್ಧತೆ.
- ✓ ನಾಲ್ಕನೇ ತರಗತಿಗೆ ನಲಿ-ಕಲಿ ವಿಸ್ತರಣೆಗಾಗಿ ಶಾಲಾ ಸಿದ್ಧತೆ.
- ✓ ಮೊದಲ ಪೀಳಿಗೆಯ ಕಲಿಕಾರ್ಥಿಗಳ ಅಧ್ಯಯನ.
- ✓ ಶಾಲೆ ಸಮುದಾಯ ಸಂಬಂಧ ಮತ್ತು ಶಾಲೆಯ ಹೊಣೆಗಾರಿಕೆ.
- ✓ ಬಿಸಿಯೂಟ ಯೋಜನೆಯ ಅನುಷ್ಠಾನ ಮತ್ತು ಅದರ ಪರಿಣಾಮಗಳು
- ✓ ಶಿಕ್ಷಕತರಬೇತಿ ಮತ್ತು ಉಪಯುಕ್ತತಾ ಮೌಲ್ಯ
- ✓ ಶಿಕ್ಷಕರ ಕಾರ್ಯತೃಪ್ತಿ ಮತ್ತು ವಿದ್ಯಾರ್ಥಿಗಳ ಸಾಧನೆ

**ಚಟುವಟಿಕೆ 5**

ಬಹುಕೇಂದ್ರಿತ ಅಧ್ಯಯನವನ್ನು ಕೈಗೊಳ್ಳಬಹುದಾದ ಇನ್ನಷ್ಟು ಕ್ಷೇತ್ರಗಳನ್ನು ಪಟ್ಟಿಮಾಡಿ ಅದರ ಅಗತ್ಯವನ್ನು ಉದ್ದೇಶಗಳ ರೂಪದಲ್ಲಿ ನಿರೂಪಿಸಿ. ಚರ್ಚಿಸಿ.

ಹೆಚ್ಚುವರಿ ಅಧ್ಯಯನಕ್ಕಾಗಿ ಸರ್ವ ಶಿಕ್ಷಣ ಅಭಿಯಾನ –ಕರ್ನಾಟಕವು ಹೊರತಂದಿರುವ 'ಪ್ರಯೋಗಾಲಯ ಕ್ಷೇತ್ರ ಚಟುವಟಿಕೆಗಳು ಮತ್ತು ಬಹುಕೇಂದ್ರಿತ ಅಧ್ಯಯನಗಳು' ತರಬೇತಿ ಸಾಹಿತ್ಯ(2006)ನ್ನು ಅವಲೋಕಿಸಬಹುದು.

## ದಾಖಲೀಕರಣ ಹಾಗೂ ಮಾಹಿತಿ ಹಂಚಿಕೊಳ್ಳುವಿಕೆ

ಮಾಹಿತಿ ನಿರ್ವಹಣೆಯ ಮುಖ್ಯ ಉದ್ದೇಶವು ಹಿಂದಿನ ಅನುಭವಗಳ ಆಧಾರದಲ್ಲಿ ಮುಂದಿನ ಕಾರ್ಯಯೋಜನೆ ಹಾಕಿಕೊಳ್ಳಲು ಅನುವು ಮಾಡಿಕೊಡುವುದಾಗಿರುತ್ತದೆ. ಸಂಖ್ಯಾತ್ಮಕ ಮಾಹಿತಿ ಒಂದು ಯೋಜನೆಯ ಅನುಷ್ಠಾನಕ್ಕೆ ಬೇಕಾದ ಆರ್ಥಿಕ ಸಹಾಯ, ಫಲಾನುಭವಿಗಳ ಸಂಖ್ಯೆ ಇತ್ಯಾದಿಗಳನ್ನು ನಿರ್ಧರಿಸಲು ಸಹಾಯ ಮಾಡುತ್ತದೆ. ಗುಣಾತ್ಮಕ ಮಾಹಿತಿಯಿಂದ ಒಂದು ಕಾರ್ಯಕ್ರಮದ ಪ್ರಕ್ರಿಯೆಗಳನ್ನು ಹೆಚ್ಚು ತಾರ್ಕಿಕವಾಗಿ ಹಾಗೂ ಅರ್ಥಪೂರ್ಣವಾಗಿ ಯೋಜಿಸಿಕೊಳ್ಳಲು ಸಹಾಯವಾಗುತ್ತದೆ. ಗುಣಾತ್ಮಕ /ವಿವರಣಾತ್ಮಕ ಮಾಹಿತಿ ಒಂದು ಕಾರ್ಯಕ್ರಮವು ಒಳಗೊಂಡ ಅನುಭವಗಳ ಒಂದು ಕ್ರೋಡೀಕೃತ ವಿವರಣೆಯಾಗಿರುತ್ತದೆ. ಆದ್ದರಿಂದ ಹೊಸ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿವಾಗ ಯೋಜನೆಗಳನ್ನು ರೂಪಿಸುವವರಿಗೆ ಹಿಂದಿನ ಕಾರ್ಯಕ್ರಮಗಳ ಕುರಿತಾದ ಗುಣಾತ್ಮಕ ಮಾಹಿತಿ ಲಭ್ಯವಿರಬೇಕು ಹಾಗೂ ಆ ಮಾಹಿತಿಯನ್ನು ಅವರು ಆಳವಾಗಿ ಅಭ್ಯಸಿಸಿರಬೇಕು. ಸಂಖ್ಯಾತ್ಮಕ ಮಾಹಿತಿ ಎಲ್ಲಿ? ಎಷ್ಟು? ಎಂಬ ಪ್ರಶ್ನೆಗಳಿಗೆ ಉತ್ತರವಾದರೆ ಗುಣಾತ್ಮಕ ಗುಣಾತ್ಮಕ ಮಾಹಿತಿ ಹೇಗೇ? ಹೇಗಿರಬೇಕು? ಎಂಬ ಪ್ರಕ್ರಿಯೆಯನ್ನು ಆಧರಿಸಿದ ಪ್ರಶ್ನೆಗಳನ್ನು ಉತ್ತರಿಸುತ್ತದೆ.

ಈ ಎರಡು ಮಾಹಿತಿಗಳನ್ನು ಸಮೀಕ್ಷೆ, ಸಂಶೋಧನೆ, ಅಧ್ಯಯನಗಳ ಮೂಲಕ ಪಡೆದುಕೊಳ್ಳಬಹುದು. ಸಂಖ್ಯಾತ್ಮಕ ಮಾಹಿತಿ ಸಾಮಾನ್ಯವಾಗಿ ಸಂಬಂಧಿತ ಕಚೇರಿಗಳಲ್ಲಿ ದೊರಕುತ್ತದೆ. ಆದರೆ ವಿವರಣಾತ್ಮಕ ಮಾಹಿತಿ ಕ್ಷೇತ್ರದಿಂದಲೇ ಅವಲೋಕನ, ಚರ್ಚೆಗಳ ಮೂಲಕ ಪಡೆಯಬೇಕಾಗುತ್ತದೆ. ಇದಕ್ಕಾಗಿ ಬೇಕಾದ ನಮೂನೆಗಳನ್ನು ಮೊದಲೇ ಸಿದ್ಧಪಡಿಸಿಕೊಂಡರೇ ಉತ್ತಮ.

ಉದಾಹರಣೆಗಾಗಿ ಒಂದು ತರಬೇತಿ ಕಾರ್ಯಕ್ರಮವು ಎಷ್ಟರಮಟ್ಟಿಗೆ ಶಿಕ್ಷಕರನ್ನು ತಲುಪಿದೆ ಎಂದು ತಿಳಿಯಲು ಎರಡು ರೀತಿಯ ನಮೂನೆಗಳು ಇರಬಹುದು.

1. ತರಬೇತಿಯ ಕೊನೆಯಲ್ಲಿ ಶಿಕ್ಷಕರಿಂದ ಹಿಮ್ಮಾಹಿತಿ ಪಡೆಯುವ ನಮೂನೆ.
2. ತರಗತಿಯಲ್ಲಿ ತರಬೇತಿಯಲ್ಲಿ ಹೇಳಲಾದ ಅಂಶಗಳು ಅನುಷ್ಠಾನವಾಗುತ್ತಿದೆಯೇ ಎಂಬುದನ್ನು

ದಾಖಲಿಸಿಕೊಳ್ಳುವ ನಮೂನೆ.

ಈ ಎರಡೂ ನಮೂನೆಗಳು ಕಾರ್ಯಕ್ರಮದಿಂದ ಕಾರ್ಯಕ್ರಮಕ್ಕೆ ಬದಲಾಗಬಹುದು. ಆದರೇ ಈ ಎರಡು ರೀತಿಯ ದಾಖಲೀಕರಣದಿಂದ ವಾರ್ಷಿಕಯೋಜನೆ ಹಾಕಿಕೊಳ್ಳಲು ಬೇಕಾದ ಮಾಹಿತಿ ಲಭ್ಯವಾಗುತ್ತದೆ. ಪ್ರತಿ ಕಾರ್ಯಕ್ರಮವೂ ಹಿಂದಿನ ಪ್ರಯತ್ನಗಳ ಆಧಾರದಲ್ಲಿ ರೂಪಿಸಲ್ಪಡಬೇಕು. ಕಾರ್ಯಕ್ರಮಗಳು ಅನಗತ್ಯವಾಗಿ ಪುನರಾವರ್ತನೆ ಆಗಬಾರದು.

ಯಾವುದೇ ಸಂಶೋಧನೆ/ಅಧ್ಯಯನಗಳನ್ನು ಕೈಗೊಂಡಾಗ ಮಾಹಿತಿಯ ದಾಖಲೀಕರಣ ಒಂದು ಮುಖ್ಯ ಅಂಶ. ಮಾಹಿತಿಯ ದಾಖಲೀಕರಣ ಹಲವು ಕಾರಣಗಳಿಂದಾಗಿ ಮುಖ್ಯವೆನಿಸುತ್ತದೆ.

1. ದಾಖಲಿಸಿದ ಮಾಹಿತಿಯನ್ನು ಅವಲೋಕಿಸಿದಾಗ ಸಂಬಂಧಿತ ವಿಷಯವು ಯಾವ ರೀತಿ ಬೆಳೆದುಬಂದಿದೆ, ಯಾವ ಯಾವ ಬದಲಾವಣೆಗಳನ್ನು ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ. ಮುಂದಿನ ಕಾರ್ಯಯೋಜನೆ ಹಾಕಿಕೊಳ್ಳಲು ಇದು ಆವಶ್ಯಕ.
2. ವಿವಿಧ ಕಾರ್ಯಕ್ರಮಗಳ, ಅವುಗಳ ಅನುಷ್ಠಾನದ ಪರಿಣಾಮಕಾರಿತ್ವದ ಕುರಿತಾದ ಮಾಹಿತಿ ಲಭ್ಯವಿದ್ದರೆ ಅಂತಹುದೇ ಪ್ರಯೋಗಗಳ ಪುನರಾವರ್ತನೆ ತಪ್ಪಿಸಬಹುದು.
3. ಇತರ ಏಜೆನ್ಸಿಗಳೊಂದಿಗೆ ಈ ಮಾಹಿತಿ ಹಂಚಿಕೊಳ್ಳಬಹುದು. ಇದರಿಂದ ಶಿಕ್ಷಣದಲ್ಲಿ ಆಸಕ್ತಿ ಇರುವ ಎಲ್ಲರೂ ಲಾಭ ಪಡೆಯುತ್ತಾರೆ. ರಾಜ್ಯದಲ್ಲಿ ನಡೆಯುವ ಶೈಕ್ಷಣಿಕ ಪ್ರಯೋಗಗಳಿಗೆ ಒಂದು ಸ್ಪಷ್ಟ ಗುರಿ ಲಭಿಸುತ್ತದೆ.

ದಾಖಲೀಕರಣವು ಹೇಗಿರಬೇಕು ಎಂಬುದೂ ಗಮನಿಸಬೇಕಾದ ಅಂಶ. ಪ್ರತಿ ದಾಖಲೀಕರಣಕ್ಕೂ ಎರಡು ಆಯಾಮಗಳಿರುತ್ತವೆ.

1. ಪರಿಮಾಣಾತ್ಮಕ/ಸಂಖ್ಯಾತ್ಮಕ ಮಾಹಿತಿಯ ಅಯಾಮ
2. ವಿವರಣಾತ್ಮಕ/ಗುಣಾತ್ಮಕ ಮಾಹಿತಿಯ ಆಯಾಮ

ಬಹಳಷ್ಟು ದಾಖಲೀಕರಣಗಳು ಸಂಖ್ಯಾತ್ಮಕ ಕ್ರೋಢೀಕರಣಕ್ಕೇ ನಿಂತುಬಿಡುತ್ತವೆ. ಆ ಆಧಾರದಲ್ಲಿ ನಾವು ಪಡಕೊಳ್ಳುವ ಒಳನೋಟಗಳೇನು, ಮುಂದಿನ ಕಾರ್ಯಚಟುವಟಿಕೆಗಳಿಗೆ ಇವುಗಳ ನಿಹಿತಾರ್ಥಗಳೇನು ಇತ್ಯಾದಿ ಚರ್ಚೆಯನ್ನು ದಾಖಲಿಸುವುದು ಕೂಡಾ ಮುಖ್ಯವೇ. ಯಾವುದೇ ಒಂದು ಸಂಶೋಧನೆ/ಅಧ್ಯಯನದ ಪರಿಣಾಮ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಅದರ ಪ್ರಕ್ರಿಯೆ ಕೂಡಾ. ಪರಿಣಾಮಕ್ಕಾಗಿ ಪ್ರಕ್ರಿಯೆ ಎಂದಾಗಬಾರದು. ಶೈಕ್ಷಣಿಕವಾಗಿ ಸರಿಯಾದ ಪ್ರಕ್ರಿಯೆಗಳಿಂದ ಉಂಟಾದ ಪರಿಣಾಮಗಳು ಮಾತ್ರ ಸುಸ್ಥಿರವಾಗಿರುತ್ತವೆ. ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳದೆ ಬರೀ ಬಾಯಿಪಾಠ ಮಾಡಿ ಉತ್ತಮ ಅಂಕಗಳನ್ನು ಗಳಿಸಬಹುದು. ಆದರೆ ಅಂತಹ ಕಲಿಕೆ ಪರೀಕ್ಷೆಯ ಗಡಿ ದಾಟುವುದಿಲ್ಲ. ಅದೇ ಕಲಿಕಾ ಪ್ರಕ್ರಿಯೆಯಲ್ಲಿ ಸರಿಯಾಗಿ ತೊಡಗಿಸಿಕೊಂಡಾಗ ಕಲಿಕೆಯು ಪರೀಕ್ಷೆಯ ಗಡಿ ದಾಟಿ ಜೀವನಕ್ಕೇ ಅಧಾರವಾಗುತ್ತದೆ. ಆದುದರಿಂದ ಯಾವ ಪ್ರಕ್ರಿಯೆಗಳಿಂದ ಒಂದು ಅಂತಿಮ ಪರಿಣಾಮ ಬಂದಿತು ಎನ್ನುವುದು ಮುಖ್ಯ. ಪ್ರಯೋಗಗಳ ಬಗ್ಗೆ ತಿಳಿಯುವವರು ಈ ಪ್ರಕ್ರಿಯೆಗಳ ಬಗ್ಗೆ ತಿಳಿಯಬೇಕು. ಅದಕ್ಕೇ ಪ್ರಕ್ರಿಯೆಯ ದಾಖಲೀಕರಣ ಮುಖ್ಯವಾಗುತ್ತದೆ.

***ಚಟುವಟಿಕೆ 6***

ನೀವು ಈಗ ಪಡೆ0ಯುತ್ತಿರುವ ಈ ತರಬೇತಿ0ಯ ಈ ದಿನದ ಕುರಿತಾಗಿ ನಿಮಗೇನನ್ನಿಸುತ್ತದೆ ಎಂಬುದನ್ನು ವಿವರಣಾತ್ಮಕವಾಗಿ ಇಲ್ಲಿ ಬರೆಯಿರಿ. ಒಂದು ವೇಳೆ ನೀವು ಈ ಸಂಚಿಕೆ0ಯನ್ನು ಓದುತ್ತಿರುವಿರಿ ಎಂದಾದರೆ, ಈ ಸಂಚಿಕೆ0ಯನ್ನು ಓದುತ್ತಿದ್ದಂತೆ ನಿಮಗೆ ಏನನ್ನಿಸುತ್ತಿದೆ ಎಂಬುದನ್ನು ವಿವರಣಾತ್ಮಕವಾಗಿ ಇಲ್ಲಿ ಬರೆಯಿರಿ. ನಿಮ್ಮ ಬರೆವಣಿಗೆ0ಯಲ್ಲಿ ಈ ಕೆಳಗಿನ ಅಂಶಗಳು ಇದ್ದರೆ ಉತ್ತಮ.

– ಇಲ್ಲಿ ನೀಡಲಾಗುತ್ತಿರುವ ಮಾಹಿತಿ ನಿಮ್ಮ ವೃತ್ತಿಪರ ಬೆಳೆವಣಿಗೆಗೆ ಸಹಾ0ಯವಾಗುತ್ತದೆ ಅನಿಸುತ್ತದೆ0ಯೇ? ಹೇಗೆ?
– ಇದರ ಹೊರತಾಗಿ ಏನು ಮಾಡಬಹುದಾಗಿತ್ತು?

## ಮಾಹಿತಿ ಹಂಚಿಕೊಳ್ಳುವ ವೇದಿಕೆ

ಡಯಟ್ ಸಂಸ್ಥೆಯ ವ್ಯಾಪ್ತಿಯಲ್ಲಿ ನಡೆಸುವ ಸಮೀಕ್ಷೆ/ಸಂಶೋಧನೆ/ಅಧ್ಯಯನಗನ್ನು ದಾಖಲಿಸುವುದು ಹಾಗೂ ಆ ಮಾಹಿತಿಯನ್ನು ಶಿಕ್ಷಣ ವ್ಯವಸ್ಥೆಯ ಇತರ ಭಾಗೀದಾರರೊಡನೆ ಹಂಚಿಕೊಳ್ಳುವುದು ಅಗತ್ಯವಾದ ಕಾರ್ಯ. ಇದನ್ನು ಯಶಸ್ವಿಯಾಗಿ ನಿರ್ವಹಿಸಲು ಆ ಸಂಸ್ಥೆಯು ಮಾಡಿಕೊಂಡ ರಚನೆಗಳು ಹಾಗೂ ವೇದಿಕೆಗಳು ಸಹಾಯಮಾಡುತ್ತವೆ. ಬಹುಶ: ನಮ್ಮ ಅನುಭವಗಳಿಂದ ಇತರರು ಹಲವು ವಿಷಯಗಳನ್ನು ತಿಳಿದುಕೊಳ್ಳಬಹುದು ಅಥವಾ ನಾವು ಇತರರ ಅನುಭವಗಳಿಂದ ಕಲಿತುಕೊಳ್ಳಬಹುದು. ಒಂದೇ ರೀತಿಯ ಅಧ್ಯಯನಗಳು ಪುನರಾವರ್ತಿಸಲ್ಪಡುವುದನ್ನೂ ಇದರಿಂದ ತಪ್ಪಿಸಬಹುದು. ಒಂದು ಶೈಕ್ಷಣಿಕ ಅಧ್ಯಯನದ ಆಧಾರದಲ್ಲಿ ಇನ್ನೊಂದು ಅಧ್ಯಯನವನ್ನು ರೂಪಿಸಲು ಸಾಧ್ಯವಾಗುವುದರಿಂದ ಪ್ರತಿ ಅಧ್ಯಯನವೂ ಹೊಸ ಅನ್ವೇಷಣೆಗಳಿಗೆ ಕಾರಣವಾಗುತ್ತದೆ. ಮಾಹಿತಿ ಹಂಚಿಕೊಳ್ಳುವಿಕೆಯು ಆಯಾ ಸಂಸ್ಥೆಯ ಹಂತದಲ್ಲೆ ಅಗಬೇಕಾದ ಕಾರ್ಯ. ಮಾಹಿತಿ ಹಂಚಿಕೊಳ್ಳುವ ದೃಷ್ಟಿಯಿಂದ ಡಯಟ್ ಗಳಲ್ಲಿ ನಾವು ಹುಟ್ಟು ಹಾಕಬಹುದಾದ ಕೆಲವು ರಚನೆ ಹಾಗೂ ವೇದಿಕೆಗಳನ್ನು ಈಗ ಚರ್ಚಿಸೋಣ.

- ಪ್ರತೀ ತಿಂಗಳ ಶೈಕ್ಷಣಿಕ ಸಭೆ .
- ಶೈಕ್ಷಣಿಕ ವಿಚಾರಗಳ ಪ್ರಚಾರಕ್ಕಾಗಿ ಬುಲಟಿನ್ ಬೋರ್ಡ ಬಳಕೆ/ನಿರ್ವಹಣೆ.
- ತರಬೇತಿ ಪಡೆದ ವ್ಯಕ್ತಿಯಿಂದ ತಾನು ಪಡೆದ ತರಬೇತಿಯ ಹಾಗೂ ಅದರ ನಿಹಿತಾರ್ಥದ ಕುರಿತಂತೆ ಸಭೆಯ ಏರ್ಪಾಡು.
- ಪ್ರಗತಿ ಅವಲೋಕನ ಸಮಿತಿ.
- ಕೆಲವು ಸಭೆಗಳಲ್ಲಿ ಶೈಕ್ಷಣಿಕ ಲೇಖನಗಳ ಮಂಡನೆ ಮತ್ತು ಚರ್ಚೆನಡೆಸಲು, ಹಾಗೂ ಪ್ರಕಟಿಸಲು ಒಂದು ವೇದಿಕೆ.
- ಪ್ರತಿ ಚಟುವಟಿಕೆಯಲ್ಲೂ ಒಂದು ತಂಡವನ್ನು ತೊಡಗಿಸಿಕೊಳ್ಳುವುದು.
- ಇತರ ಡಯಟ್‌ಗಳ ಜೊತೆ ಮಾಹಿತಿ ಹಂಚಿಕೊಳ್ಳಲು ತಿಂಗಳ ವಾರ್ತಾ ಪತ್ರಿಕೆ ಅರಂಭಿಸುವುದು.
- ರಾಜ್ಯ ಮಟ್ಟದಲ್ಲಿ ಚರ್ಚೆ/ಸಂವಾದಗಳನ್ನು ಏರ್ಪಡಿಸುವುದು.
- ತಿಂಗಳಿಗೊಮ್ಮೆ ಯಾರಾದರೂ ಒಬ್ಬರು ತಾವು ಓದಿದ ಹೊಸ ಪುಸ್ತಕ/ಹೊಸ ಅನ್ವೇಷಣೆಗಳ ಬಗ್ಗೆ ಉಪನ್ಯಾಸ ನೀಡುವುದು.
- ಡಯಟ್ ಗಾಗಿ ಒಂದು ವೆಬ್ ಸೈಟ್ ಆರಂಭಿಸಿ ಅಲ್ಲಿ ಡಯಟ್ ನ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವುದು ಹಾಗೂ ಚರ್ಚಾ ವೇದಿಕೆಗಳನ್ನು ಹುಟ್ಟುಹಾಕುವುದು.

***ಚಟುವಟಿಕೆ 7***

ಡಯಟ್‌ಗಳಲ್ಲಿ ವೃತ್ತಿಪರ ಮಾಹಿತಿ ಹಂಚಿಕೊಳ್ಳಲು ಇನ್ನು ಯಾವ ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು ಎಂಬುದನ್ನು ಇಲ್ಲಿ ಪಟ್ಟಿ ಮಾಡಿ. ಇವುಗಳಲ್ಲಿ ನೀವು ವೈಯಕ್ತಿಕವಾಗಿ ಯಾವ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುತ್ತೀರಿ ಎಂಬುದನ್ನು ನಿರ್ಧರಿಸಿ. ನಿಮ್ಮ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಏನು ಮಾಡಬೇಕು ಎಂಬುದನ್ನು ಯೋಚಿಸಿ. ನಿಮ್ಮ ಸಹೋದ್ಯೋಗಿಗಳೊಡನೆ ಚರ್ಚಿಸಿ.

## ಮಾಹಿತಿ ನಿರ್ವಹಣೆ ಹಾಗೂ ಅಧ್ಯಯನಗಳ ಕ್ರೋಢೀಕರಣ

ಒಂದು ಶೈಕ್ಷಣಿಕ ವರ್ಷದಲ್ಲಿ ಡಯಟ್ ಹತ್ತಾರು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತದೆ. ಈ ಎಲ್ಲ ಚಟುವಟಿಕೆಗಳ ಮಾಹಿತಿಯನ್ನು ವ್ಯವಸ್ಥಿತವಾಗಿ ದಾಖಲಿಸಿಕೊಳ್ಳುವುದು ಹಾಗೂ ಬೇಕಾದ ರೀತಿಯಲ್ಲಿ ಕ್ರೋಢೀಕರಿಸಿಕೊಳ್ಳಲು ಅನುವಾಗುವಂತೆ ತಯಾರಾಗಿಟ್ಟಿರುವುದು ಬಹು ಮುಖ್ಯ. ಮಾಹಿತಿಯನ್ನು ಯಾವುದೇ ರೀತಿಯಲ್ಲಿ ಸಂಗ್ರಹಿಸಿದರೂ ಕೊನೆಗೆ ಕಂಪ್ಯೂಟರ್‌ನಲ್ಲಿ ದಾಖಲಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುವುದು ಅಗತ್ಯ. ಪ್ರತಿ ಕಾರ್ಯಕ್ರಮದ ಕ್ರೋಢೀಕೃತ ವರದಿಯನ್ನು ಒಂದು ನಿಗದಿತ ನಮೂನೆಯಲ್ಲಿ ದಾಖಲಿಸಿಕೊಂಡರೆ ಈ ಎಲ್ಲ ಕಾರ್ಯಕ್ರಮಗಳ ವರದಿಯನ್ನು ತಕ್ಷಣವೇ ಕ್ರೋಢಿಕರಿಸಿಕೊಳ್ಳಲು ಸಾಧ್ಯ. ಕೆಲವೊಮ್ಮೆ ಕೆಲವು ವಿಷಯಗಳ ಮಾಹಿತಿ ಮಾತ್ರ ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸಬೇಕಾಗಬಹುದು. ಉದಾಹರಣೆಗೆ ಒಂದು ವರ್ಷದಲ್ಲಿ ಎಷ್ಟು ಜನ ಶಿಕ್ಷಕರಿಗೆ ತರಬೇತಿ ನೀಡುವ ಗುರಿ ಇತ್ತು ಮತ್ತು ವಾಸ್ತವವಾಗಿ ಎಷ್ಟು ಜನರಿಗೆ ತರಬೇತಿ ನೀಡಲಾಯಿತು ಎಂಬ ಮಾಹಿತಿ ಬೇಕಾದರೆ, ನಮ್ಮ ಕಂಪ್ಯೂಟರ್ ಫೈಲ್ ಗಳಿಂದ ಅವಷ್ಟೇ ವಿಷಯಗಳನ್ನು ಕಾಪಿ ಮಾಡಿಕೊಂಡು ಕ್ರೋಢೀಕೃತ ಮಾಹಿತಿಯ ಒಂದೇ ಒಂದು ಕೋಷ್ಟಕ ತಯಾರು ಮಾಡಬಹುದು. ಒಂದು ಜಿಲ್ಲೆಯ ಎಲ್ಲ ಬಿ ಆರ್ ಸಿಗಳಲ್ಲಿ ನಡೆಸಲಾದ ಒಂದು ನಿರ್ದಿಷ್ಟ ತರಬೇತಿಯ ಪ್ರಕ್ರಿಯೆಗಳ ತುಲನಾತ್ಮಕ ವರದಿ ಬೇಕಾದರೆ, ಅಂತಹ ಪ್ರಕ್ರಿಯೆಗಳ ದಾಖಲೆಗಳನ್ನೆಲ್ಲಾ ಒಂದೆಡೆ ಸೇರಿಸಿ ಬೇಕಾದ ರೂಪದಲ್ಲಿ ಅಚ್ಚು ಹಾಕಿಕೊಳ್ಳಬಹುದು. ಯಾವುದೇ ಮಾಹಿತಿಯನ್ನು ದಾಖಲಿಸಿಕೊಳ್ಳುವಾಗ ವ್ಯವಸ್ಥಿತ ರೀತಿಯಲ್ಲಿ ದಾಖಲಿಸಿಕೊಳ್ಳಬೇಕು.

ಅಂತೆಯೇ ಜಿಲ್ಲೆಯಲ್ಲಿ ನಡೆಸಲಾಗುವ ವಿವಿಧ ಅಧ್ಯಯನಗಳ ವರದಿಗಳನ್ನೂ ಕ್ರೋಢೀಕರಿಸಿಕೊಳ್ಳಬಹುದು. ಇದರಿಂದ ಎಲ್ಲಾ ಅಧ್ಯಯನಗಳ ಒಟ್ಟು ಪರಿಣಾಮವನ್ನು ತಿಳಿಯಲು ಸುಲಭವಾಗುತ್ತದೆ.

***ಚಟುವಟಿಕೆ 8***

ಜಿಲ್ಲಾ ಮಟ್ಟದಲ್ಲಿ ಡಯಟ್ ನಲ್ಲಿ ಯಾವ ಯಾವ ಮಾಹಿತಿಯ ದಾಖಲೀಕರಣ ಹಾಗೂ ಕ್ರೋಢೀಕರಣ ಮಾಡಬೇಕಾಗುತ್ತದೆ ಎಂಬುದನ್ನು ಪಟ್ಟಿಮಾಡಿ ಹಾಗೂ ಅವನ್ನು ಸುಲಭವಾಗಿ ***ಕ್ರೋಢೀಕರಿಸಲು ಸಾಧ್ಯವಾಗುವಂತಹ ನಮೂನೆಗಳನ್ನು ತಯಾರಿಸಿ.***

## ಅಧ್ಯಯನಗಳನ್ನು/ಸಂಶೋಧನೆಗಳನ್ನು ನಡೆಸಲು ಪ್ರಸ್ತಾವನೆಗಳನ್ನು ತಯಾರಿಸುವುದು

ಅಧ್ಯಯನಗಳನ್ನು ಕೈಗೊಳ್ಳುವಾಗ ಕೆಲವೊಮ್ಮೆ ಮೇಲಾಧಿಕಾರಿಗಳ ಅಥವಾ ಇಲಾಖೆಯ ಅನುಮತಿ ಪಡೆಯಬೇಕಾಗಬಹುದು. ಕೆಲವೊಮ್ಮೆ ಹೆಚ್ಚಿನ ಹಣಕಾಸಿನ ಸಹಾಯಕ್ಕಾಗಿ ಮನವಿ ಸಲ್ಲಿಸಬೇಕಾಗಬಹುದು. ಹಲವು ಬಾರಿ ಶೈಕ್ಷಣಿಕ ಸಂಶೋಧನೆಗಳಿಗಾಗಿ ಹಣಕಾಸಿನ ನೆರವನ್ನು ನೀಡುವ ಏಜೆನ್ಸಿಗಳು ಪ್ರಸ್ತಾವನೆಗಳನ್ನು ಆಹ್ವಾನಿಸಬಹುದು. ಪ್ರಸ್ತಾವನೆಯು ನಾವು ಕೈಗೊಳ್ಳುವ ಅಧ್ಯಯನಗಳ ರೂಪುರೇಷೆಗಳನ್ನೊಳಗೊಂಡ ಸಂಕ್ಷಿಪ್ತ ವಿವರಣೆಗಳನ್ನು

ಒಳಗೊಂಡಿರುತ್ತದೆ. ಪ್ರಸ್ತಾವನೆಯು ನಮಗೆ ಮಾರ್ಗದರ್ಶಿಯಂತೆ ಕೆಲಸಮಾಡಲೂಬಹುದು. ಸಂಶೋಧನಾ ಪ್ರಸ್ತಾವನೆಗಳು ಮುಖ್ಯವಾಗಿ ಈ ಕೆಳಗಿನ ಅಂಶಗಳನ್ನು ಒಳಗೊಂಡಿರಬೇಕಾಗುತ್ತದೆ.

1. ಅಧ್ಯಯನ ಕೈಗೊಳ್ಳುವವರ ಹೆಸರು, ವಿಳಾಸ/ಸಂಸ್ಥೆಯ ಹೆಸರು
2. ಅಧ್ಯಯನ ಕೈಗೊಳ್ಳುವವರ ಶೈಕ್ಷಣಿಕ ಅರ್ಹತೆಗಳು
3. ಉದ್ದೇಶಿತ ಅಧ್ಯಯನದ ಸ್ವರೂಪ - ಸಂಶೋಧನೆ/ಕ್ರಿಯಾ ಸಂಶೋಧನೆ/ಪ್ರಯೋಗಾಲಯ ಕ್ಷೇತ್ರ ಅಧ್ಯಯನ/ಸಮೀಕ್ಷೆ/ಪ್ರಯೋಗಗಳು ಇತ್ಯಾದಿ
4. ಅಧ್ಯಯನಕ್ಕೆ ಸಹಭಾಗಿಗಳಿದ್ದಲ್ಲಿ ಅವರ ವಿವರಗಳು
5. ಅಧ್ಯಯನದ ಉದ್ದೇಶಗಳು
6. ಅಧ್ಯಯನದ ಆವಶ್ಯಕತೆಯ ನಿರೂಪಣೆ/ಇದುವರೆಗೆ ಈ ನಿಟ್ಟಿನಲ್ಲಿ ಆಗಿರುವ ಪ್ರಯತ್ನಗಳ ಮಾಹಿತಿ
6. ಮುಖ್ಯ ಆಧಾರಕಲ್ಪನೆಗಳು
7. ಅಧ್ಯಯನದ ವಿಧಾನ/ಸ್ಯಾಂಪಲ್/ಮಾಹಿತಿ ಸಂಗ್ರಹಣಾ ತಂತ್ರಗಳು/ಮಾಹಿತಿ ವಿಶ್ಲೇಷಣಾ ತಂತ್ರಗಳು
7. ಅನುಷ್ಠಾನದ ಕಾರ್ಯಯೋಜನೆ
8. ಹಣಕಾಸಿನ ಯೋಜನೆ
9. ಅಧ್ಯಯನದ ನಿಹಿತಾರ್ಥಗಳು ಪ್ರಸ್ತುತ ನಿರೀಕ್ಷಿಸಲಾದಂತೆ
10. ಆಧಾರ ಗ್ರಂಥಗಳು

ಹಣಕಾಸಿನ ಸಹಾಯ ನೀಡುವ ಏಜೆನ್ಸಿಗಳು ತಮ್ಮದೇ ಆದ ಪ್ರಸ್ತಾವನಾ ನಮೂನೆಗಳನ್ನು ನೀಡಿರುತ್ತಾರೆ. ಪ್ರಸ್ತಾವನೆ ಒಳಗೊಂಡಿರುವ ಅಂಶಗಳು ಪ್ರಸ್ತಾವನೆಯನ್ನು ಯಾರಿಗೆ ಮತ್ತು ಏತಕ್ಕಾಗಿ ಸಲ್ಲಿಸುತ್ತಿದ್ದೇವೆ ಎಂಬುದರ ಮೇಲೆ ಬದಲಾಗಲೂಬಹುದು. ಇಂತಹ ಯಾವ ಒತ್ತಡಗಳಿಲ್ಲದಿದ್ದರೂ ಅಧ್ಯಯನವನ್ನು ಆರಂಭಿಸುವ ಮುನ್ನ ಒಂದು ಪ್ರಸ್ತಾವನೆಯನ್ನು ನಾವೇ ತಯಾರಿಸಿಟ್ಟುಕೊಳ್ಳುವುದು ಒಳ್ಳೆಯದು. ಇದರಿಂದ ನಮ್ಮ ಅಧ್ಯಯನವು ಯಾವ ರೀತಿ ಮುಂದುವರಿಯಬೇಕು ಎಂಬುದು ನಮಗೆ ಸ್ಪಷ್ಟವಾಗುತ್ತದೆ ಹಾಗೂ ಕಾರ್ಯಯೋಜನೆಗಳನ್ನು ಹಾಕಿಕೊಳ್ಳಲು ಅನುಕೂಲವಾಗುತ್ತದೆ.

***ಚಟುವಟಿಕೆ 9***

ನೀವು ಡಯಟ್ ನಲ್ಲಿ ಕೈಗೊಳ್ಳಬಹುದಾದ ಒಂದು ಅಧ್ಯಯನಕ್ಕೆ ಪ್ರಸ್ತಾವನೆಯನ್ನು ಬರೆಯಿರಿ. ಈ ಪ್ರಸ್ತಾವನೆಯನ್ನು ನೀವು ಯಾರನ್ನು ಉದ್ದೇಶಿಸಿ ತಯಾರಿಸಿದ್ದೀರೋ ಅವರಿಗೆ ನೀಡಿ ಅವರ ಅಭಿಪ್ರಾಯವನ್ನು ತಿಳಿಯಿರಿ. ಅಂತೆಯೇ ನಿಮ್ಮ ಸಹೋದ್ಯೋಗಿಗಳು ತಯಾರಿಸಿದ ಪ್ರಸ್ತಾವನೆಗಳನ್ನು ಓದಿ ಪರಸ್ಪರ ಚರ್ಚಿಸಿ.

## ಇತರ ಸಂಸ್ಥೆಗಳೊಡನೆ ಸಂಪರ್ಕ

ಡಯಟ್ ತನ್ನ ವ್ಯಾಪ್ತಿಯಲ್ಲಿ ಬರುವ ಬಿ ಆರ್ ಸಿ ಹಾಗೂ ಸಿ ಆರ್ ಸಿ ಗಳೊಡನೆ ನಿರಂತರವಾಗಿ ಸಂಪರ್ಕದಲ್ಲಿರಬೇಕಾಗುತ್ತದೆ. ಅಂತೆಯೇ ರಾಜ್ಯಮಟ್ಟದಲ್ಲಿ ಡಿ ಎಸ್ ಇ ಆರ್ ಟಿ ಹಾಗೂ ಇತರ ಸಂಸ್ಥೆಗಳೊಡನೆ, ಸರಕಾರೇತರ ಸಂಸ್ಥೆಗಳೊಡನೆ ಸಂಪರ್ಕದಲ್ಲಿರಬೇಕಾಗುತ್ತದೆ. ಎಷ್ಟೋ ಬಾರಿ ಇದು ಆಡಳಿತಾತ್ಮಕ ಸಂಪರ್ಕವಾಗಿ ಮಾತ್ರ ಉಳಿದಿರುತ್ತದೆ. ಆದರೆ ಇವೆಲ್ಲವೂ ಶೈಕ್ಷಣಿಕ ಅಭಿವೃದ್ಧಿಗಾಗಿ ಇರುವ ಸಂಸ್ಥೆಗಳು. ಆದ್ದರಿಂದ ಡಯಟ್ ತಾನೇ

ಮುಂದಾಗಿ ಶಿಕ್ಷಣ ಚಿಂತನೆಯಲ್ಲಿ ತೊಡಗಿಕೊಂಡಿರುವ ಎಲ್ಲ ಏಜೆನ್ಸಿಗಳೊಂದಿಗೆ ಸಂಪರ್ಕ ಸಾಧಿಸಬೇಕು. ಅಂತಹ ಸಂಸ್ಥೆಗಳೊಡನೆ ವಿಚಾರ ವಿನಿಮಯ ಮಾಡಿಕೊಳ್ಳಬೇಕು. ಅವುಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು ಹಾಗೂ ಅಗತ್ಯವಿದ್ದರೆ ಅವುಗಳಿಗೆ ತಾವೇ ಸಂಪನ್ಮೂಲಗಳನ್ನು ಒದಗಿಸಬೇಕು. ರಾಷ್ಟ್ರ ಮಟ್ಟದ ಸಂಸ್ಥೆಗಳು ಹೊರತರುವ ಜರ್ನಲ್ ಗಳನ್ನು ತರಿಸಿ ಓದುವ ಪರಿಪಾಠ ಬೆಳೆಯಬೇಕು. ಹಾಗೆಯೇ ನಮ್ಮ ಅಧ್ಯಯನಗಳ ಮಾಹಿತಿಯನ್ನು ಅಂತಹ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುವುದರ ಮೂಲಕ ಹಂಚಿಕೊಳ್ಳಬಹುದು. ಇತರ ಸಂಸ್ಥೆಗಳೊಡನೆ ಅರ್ಥಪೂರ್ಣ ಸಂಪರ್ಕ ಸಾಧಿಸುವುದರಿಂದ ಹಲವು ರೀತಿಯ ಲಾಭಗಳಿವೆ.

1. ನಮ್ಮ ಕಾರ್ಯಚಟುವಟಿಕೆಗಳ ಬಗ್ಗೆ ಹೆಚ್ಚು ಸ್ಪಷ್ಟತೆ ಬೆಳೆಯುತ್ತದೆ.
2. ಕೈಗೊಳ್ಳಬೇಕಾದ ಅಧ್ಯಯನಗಳ ಬಗ್ಗೆ ಹೆಚ್ಚು ಒಳನೋಟಗಳು ಸಿಗುತ್ತವೆ.
3. ಇತರ ಏಜೆನ್ಸಿಗಳು ಪಡೆದಿರುವ ಅನುಭವದ ಆಧಾರದಲ್ಲಿ ನಮ್ಮ ಅಧ್ಯಯನ ರೂಪಿಸಿಕೊಳ್ಳಬಹುದು.
4. ಡಯಟ್‌ನ ಕಾರ್ಯಚಟುವಟಿಕೆಗಳ ಬಗ್ಗೆ ಸಮುದಾಯದಲ್ಲಿ ಅಭಿಪ್ರಾಯ ಮೂಡಿಸಬಹುದು.
5. ಸದ್ಯದ ಶೈಕ್ಷಣಿಕ ಸಂದರ್ಭಕ್ಕೆ ಅತ್ಯಂತ ಪ್ರಸ್ತುತವಾದ ವಿಷಯಗಳನ್ನೇ ಅಧ್ಯಯನಕ್ಕೆ ಆಯ್ದುಕೊಳ್ಳಲು ಸಾಧ್ಯವಾಗುತ್ತದೆ.

ಡಯಟ್ ಇತರ ಸಂಸ್ಥೆಗಳೊಡನೆ ಯಾವುದೇ ಸಂಪರ್ಕವಿಲ್ಲದೆ ಇರಲಾರದು. ಸಮಾಜದಲ್ಲಿ ಶಿಕ್ಷಣ ಚಿಂತನೆಯ ನೆಟ್‌ವರ್ಕ್ ಹುಟ್ಟುಹಾಕುವುದು ಅತ್ಯಂತ ಆವಶ್ಯಕ. ಅಂತಹ ಜಾಲದ ಕೇಂದ್ರದಲ್ಲಿ ಡಯಟ್ ಇರಬೇಕು. ಆಗ ಮಾತ್ರ ಶಿಕ್ಷಣದ ಬೆಳವಣಿಗೆ ಒಂದು ಸಾಮಾಜಿಕ ಆಂದೋಲನವಾಗುತ್ತದೆ ಹಾಗೂ ಇಡೀ ಸಮಾಜವೇ ಶಿಕ್ಷಣ ಪ್ರಕ್ರಿಯೆಯ ಸಹಭಾಗಿತ್ವ ಪಡೆಯಲು ಸಾಧ್ಯವಾಗುತ್ತದೆ, ಸಾಧ್ಯವಾಗಬೇಕು.

## ಆಕರ ಗ್ರಂಥಗಳು.


ಆರ್ ಐ ಇ, ಮೈಸೂರು ಹಾಗೂ ಡಿ ಎಸ್ ಇ ಆರ್ ಟಿ (2004), *ಪ್ರಯೋಗಾಲಯ ಕ್ಷೇತ್ರ ಯೋಜನೆ ಹಾಗೂ ಅದರ ಅನುಷ್ಠಾನಗೊಳಿಸುವಿಕೆ* – ತರಬೇತಿ ಸಾಹಿತ್ಯ

ಸರ್ವ ಶಿಕ್ಷಣ ಅಭಿಯಾನ, ಕರ್ನಾಟಕ(2006) *ಪ್ರಯೋಗಾಲಯ ಕ್ಷೇತ್ರ ಚಟುವಟಿಕೆಗಳು ಮತ್ತು ಬಹುಕೇಂದ್ರಿತ ಅಧ್ಯಯನಗಳು,* ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಶಿಅ, ಬೆಂಗಳೂರು

ಸರ್ವ ಶಿಕ್ಷಣ ಅಭಿಯಾನ, ಕರ್ನಾಟಕ(2005) *ಕ್ರಿಯಾ ಸಂಶೋಧನೆ ತರಬೇತಿ ಕೈಪಿಡಿ,* ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಶಿಅ, ಬೆಂಗಳೂರು